# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀ ಮಹಾದೇವಿ ಲಲಿತೋಪಾಖ್ಯಾನ

ಕವಿ

## ಅಗರಿ ಶ್ರೀನಿವಾಸ ಭಾಗವತ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾರ್ಯೋದ್ದೇಶ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಬ್ರಹ್ಮಾಂಡ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪದವೀಧರ ಯಕ್ಷಗಾನ ಸಮಿತಿ ಮುಂಬಯಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೮೮

**ಪಾತ್ರಗಳು:**

ಈಶ್ವರ, ಪಾರ್ವತಿ, ಗಣಪತಿ, ಗಣಗಳು, ಭಂಡಾಸುರ, ಶುಕ್ರಾಚಾರ್ಯ, ಅಮಿತ್ರಘ್ನ, ಕುಟಿಲಾಕ್ಷ, ದೇವದೂತ, ದೇವೇಂದ್ರ, ದೇವತೆಗಳು, ಶಚಿ, ವಿಶುಕ್ರ, ವಿಷಂಗ, ವಿಷ್ಣು, ಮೋಹಿನಿ, ಬೃಹಸ್ಪತಿ, ಬ್ರಹ್ಮ, ಶ್ರೀಲಲಿತೆ, ಕಾಮೇಶ್ವರ, ನಾರದ, ಸಂಪತ್ಕರಿ, ಅಶ್ವಾರೂಢೆ, ದಂಡನಾಥೆ, ಶ್ಯಾಮಲಾಂಬೆ, ದುರ್ಮದ, ಕುರಂಡ, ಕರಂಕ, ಜ್ವಾಲಾಮಾಲಿನಿ, ಚತುರ್ಬಾಹು, ಬಾಲಸರಸ್ವತಿ, ಗಜಾನನ, ಗಜಾಸುರ, ಮಹಿಷಾಸುರ, ಚಂಡ, ಮುಂಡ, ಕಾಳಿ, ರಕ್ತಬೀಜ, ರಕ್ತೇಶ್ವರಿ, ಶುಂಭ, ದೇವಿ, ವಿಶ್ವಾಚಿ, ಅಲಂಬುಸೆ, ನಕುಲೇಶ್ವರಿ

**ಕಥಾ ಸಾರಾಂಶ:**

ಹರನು ಮನ್ಮಥನನ್ನು ಹಣೆಗಣ್ಣಿನಿಂದ ಸುಟ್ಟುರುಹಿದ ಭಸ್ಮದಿಂದ ಗಣಪತಿಯು ಬಾಲಕನ ಮೂರ್ತಿ ರಚಿಸುತ್ತಾನೆ. ಅದಕ್ಕೆ ಶಿವ ಜೀವಕಳೆ ತುಂಬಿ, ಭಂಡ ಎಂಬುದಾಗಿ ಹೆಸರಿಸುತ್ತಾನೆ. ಭಂಡನು ಶಿವನನ್ನು ಮೆಚ್ಚಿಸಿ ವರಬಲಾನ್ವಿತನಾಗುತ್ತಾನೆ. ಮುಂದೆ ದೈತ್ಯಗುರು ಶುಕ್ರನ ಆಣತಿಯಂತೆ ಅಸುರಾಧಿಪತಿಯಾಗುವನು. ಕುಟಿಲಾಕ್ಷರೇ ಮೊದಲಾದ ದೈತ್ಯರು ಭಂಡನೊಡಗೂಡಿ ಲೋಕಕಂಟಕರಾದಾಗ, ತ್ರಿಮೂರ್ತಿಗಳು ಹಾಗೂ ದೇವತೆಗಳ ತೇಜಸ್ಸಿನಿಂದ ಮಹಾತ್ರಿಪುರಸುಂದರಿ ಆವಿರ್ಭವಿಸಿ, ತನ್ನ ಶಕ್ತಿಯರೊಡನೆ ದುಷ್ಟರನ್ನು ಸಂಹರಿಸಿ ಲೋಕಕ್ಕೆ ಶಾಂತಿಯುಂಟುಮಾಡುವ ಪುಣ್ಯಕಥನವಿದಾಗಿದೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಅಗರಿ ಶ್ರೀನಿವಾಸ ಭಾಗವತರು ಮೂಲತಃ ಸುರತ್ಕಲ್ ಸಮೀಪದ ಹೊಸಬೆಟ್ಟಿನವರು. ಎಡಪದವು ಹತ್ತಿರದ ಅಗರಿಯಲ್ಲಿ ನೆಲೆನಿಂತವರು. ತಂದೆ ತಿಮ್ಮಪ್ಪಯ್ಯ, ತಾಯಿ ರಾಧಮ್ಮ. ದಿ ಅಗರಿ ಶ್ರೀನಿವಾಸ ಭಾಗವತರು.1924ರ ಪೂರ್ವದಲ್ಲಿ ನಾಟಕ ರಂಗದಲ್ಲಿ ತೊಡಗಿಸಿಕೊಂಡವರಾಗಿದ್ದರು. ಸಾಹಿತ್ಯ, ಸಂಗೀತಗಳ ಮೇಲಿದ್ದ ಅಭಿಮಾನದಿಂದ ನಾಟಕ ರಂಗಗಳಲ್ಲಿ ವ್ಯವಸಾಯ ಮಾಡುತ್ತಿದ್ದರು. ದಿವಂಗತ ಪುತ್ತಿಗೆ ರಾಮಕೃಷ್ಣ ಜೋಯಿಸ ಭಾಗವತರ ಮೈತ್ರಿ ಅಗರಿ ಭಾಗವತರನ್ನು ಯಕ್ಷಗಾನ ಕಲೆಯತ್ತ ಸೆಳೆಯಿತು. ಮಂಗಳೂರಿನ ಶಿಕ್ಷಕ ತರಬೇತಿ ಶಾಲೆ ಹಾಗೂ ಕೆನರಾ ಹೈಸ್ಕೂಲಿನಲ್ಲಿ ವಾರಕ್ಕೊಮ್ಮೆ ನಡೆಯುತ್ತಿದ್ದ ತಾಳಮದ್ದಲೆ ಕೂಟಗಳಲ್ಲಿ ಭಾಗವಹಿಸುತ್ತಿದ್ದ ಅಜ್ಜ ಬಲಿಪರ ಭಾಗವತಿಕೆಯನ್ನು ಕೇಳಿ ಯಕ್ಷಗಾನ ಹಾಡುಗಾರಿಕೆಯ ವೈಶಿಷ್ಟ್ಯವೇನೆಂಬುದನ್ನು ಮನನ ಮಾಡಿಕೊಂಡರು. ಧರ್ಮಸ್ಥಳ, ಕಟೀಲು, ಕೂಡ್ಲು, ಸುರತ್ಕಲ್, ಸುಬ್ರಮಣ್ಯ ಮುಂತಾದ ಮೇಳಗಳಲ್ಲಿ ಭಾಗವತರಾಗಿ ತಿರುಗಾಟ ನಡೆಸಿದ್ದಾರೆ. ಯಕ್ಷಬ್ರಹ್ಮ ಎಂಬ ಅಭಿನಂದನ ಗ್ರಂಥ ಇವರಿಗೆ ಸಮರ್ಪಣೆಯಾಗಿದೆ. ಇವರು ೨೮ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಶ್ರೀ ದೇವಿ ಮಹಾತ್ಮೆ ಒಂದು ಲಕ್ಷಕ್ಕೂ ಅಧಿಕ ಭಾರಿ ಪ್ರದರ್ಶನಗೊಂಡಿದ್ದು ಯಕ್ಷಗಾನದ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ.

ಇವರು ಬರೆದ ಪ್ರಸಂಗಗಳು: ಶ್ರೀದೇವೀ ಮಹಾತ್ಮೆ, ಬ್ರಹ್ಮಕಪಾಲ, ಶಿವಲೀಲಾರ್ಪಣ, ಅಂಧಕಾಸುರ ವಧೆ, ಪ್ರಭಾವತೀ ಪರಿಣಯ, ಧನಗುಪ್ತ – ಮಹಾಬಲ, ಭಗವಾನ್ ಏಸುಕ್ರಿಸ್ತ, ಮಹಾದೇವೀಲಲಿತೋಪಾಖ್ಯಾನ, ನಾರಾಯಣ ಗುರು ಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ವೆಂಕಟೇಶ ಮಹಾತ್ಮೆ, ಭರತೇಶ ವೈಭವ, ಶ್ರೀದೇವಿಭ್ರಮರಾಂಬಿಕಾ ವಿಲಾಸ, ಭಸ್ಮಾಸುರ ಮೋಹಿನಿ, ಸುಂದೋಪಸುಂದರ ಕಾಳಗ, ಸಿರಿ ಮಹಾತ್ಮೆ,

ಭಸ್ಮರುದ್ರಾಕ್ಷಿ ಮಹಾತ್ಮೆ, ಭಗವಾನ್ ಬುದ್ಧ, ಅಭಯರಾಣಿ ಅಬ್ಬಕ್ಕ, ವಿಶ್ವಾಮಿತ್ರ ಮೇನಕೆ, ಶುಕ್ರಪ್ರತಾಪ, ಜಗದ್ಗುರು ಶಂಕರಾಚಾರ್ಯ, ತಾರಾ ಶಶಾಂಕ, ಕಣ್ವಪುರ ಮಹಾತ್ಮೆ, ಹೊಂಬುಚ್ಚ ಕ್ಷೇತ್ರ ಮಹಾತ್ಮೆ, ಆಟದೊಳಗಿನ ಆಟ, ತುಳಸೀ ಜಲಂಧರ, ನರಕಾಸುರ ವಧೆ.

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಸೌರಾಷ್ಟ್ರ - ತ್ರಿವುಡೆ**
ಕುಂಭಸಂಭವ ಲಾಲಿಸಾದಡೆ |
ತ್ರ್ಯಂಬಕನು ಕೈಲಾಸ ಶಿಖರದಿ |
ಅಂಬಿಕೆಯನೊಡಗೊಂಡು ಭಕ್ತ ಕು | ಟುಂಬಿಯೆನಿಸಿ || 1 ||
ಗಣರವೆರಸುತ ಮೆರೆಯೆ ಚಿಂತಾ |
ಮಣಿಮಯದ ವರರಾಜ ಭವನದಿ |
ತನಯ ಗಣಪನ ಸಹಿತ ಪಂಚಾ | ನನನು ಮುದದಿ || 2 ||
ಒಂದು ದಿನದಲಿ ಬಾಲ ಗಜಮುಖ |
ನೊಂದುಗೂಡುತ ಗಣರ ತಾ ಮುದ |
ದಿಂದ ಕೈಲಾಸದಲಿ ನಡೆತರೆ | ಚಂದದಿಂದ || 3 ||
ಕಂದುಗೊರಳನ ಫಾಲಲೋಚನ |
ದಿಂದ ದಹಿಸಿದ ಸ್ಮರನ ಭಸ್ಮವ |
ನಂದು ಕಾಣುತ ಗಣರೊಡನೆ ತಾ | ನೆಂದನಾಗ || 4 ||

**ಶಂಕರಾಭರಣ - ಅಷ್ಟ**
ಕಂಡಿರೇ | ಭಸ್ಮರಾಶಿಯ ನೀವು | ಕಂಡಿರೇ || ಪ ||
ಕಂಡಿರೆ ಭಸ್ಮ ರಾಶಿಯನು | ಮುದ |
ಗೊಂಡೆ ನಾನೀಕ್ಷಿಸುತದನು | ಎನ್ನ |
ಪಾಂಡಿತ್ಯವನು ತೋರದಿರೆನು | ಪಿತ |
ರುಂಡಮಾಲನ ಕೃಪೆಯಿಂದೆನುತಾ ವಕ್ರ |
ತುಂಡನು ಮನದೊಳಾನಂದದಿ ನಲಿಯುತ್ತ || 5 ||
ಚಿತ್ರ ರಚನೆಯ ಕೌಶಲವ | ದೋರ |
ಲರ್ತಿಯಿಂದೆರೆದು ಸಲಿಲವ | ಗಣ |
ಮೊತ್ತ ವೀಕ್ಷಿಸಲು ಕೌತುಕವ | ಕಲ |
ಸುತ್ತಲಿ ಸೌಂದರ್ಯವೆತ್ತಿಹ ನುಣುಪಾದ |
ಮೂರ್ತಿಯ ರಚಿಸಿದ ಚಾತುರ್ಯದಿಂದಲೆ || 6 ||
ಬೆರಗಾಗಿ ಸುಂದರಾಕೃತಿಗೆ | ತೋರ್ಪೆ |
ತ್ವರಿತದೊಳಗೆನ್ನ ಜನನಿಗೆ | ಕಂಡು |
ಹರುಷಗೊಂಬಳು ಮನದೊಳಗೆ | ಎಂದು |
ಕರಿವದನನು ತನ್ನ ಶಿರದಿ ಪೊತ್ತದ ತಂದು |
ಗಿರಿಜೆಗೆದೋರುತ್ತ ಪುರುಷಾಕೃತಿಯನ್ನು || 7 ||
ಪರಿಕಿಸು ತಾಯೆ ಕೌಶಲವ | ನಿನ್ನ |
ತರಳನು ನಾ ರಚಿಸಿರುವ | ವರ |
ಪುರುಷಾಕೃತಿಯಿದರ ಚೆಲುವ | ಅನ |
ವರತ ನಾ ಬಳಿಯಿರಿಸಿಕೊಂಡಾಡುವೆ |
ಹರುಷದೊಳೆನೆ ಪತಿಗೊರೆದಳು ಗಿರಿಜಾತೆ || 8 ||

**ಕೇದಾರಗೌಳ - ಅಷ್ಟ**
ಪ್ರಾಣನಾಯಕ ದೇವ | ಮೀನಾಂಕಹರನೆ ಗ |
ಜಾನನ ಸುಕುಮಾರನ ||
ಜಾಣತನವನಿದ ನೀನೋಡು ಕೌತುಕ |
ವೇನೆಂಬೆನೆಲೆರಮಣ || 9 ||
ತಳುವದಿತ್ತರೆ ಜೀವ | ಕಳೆಯನ್ನು ಪ್ರತಿಮೆಗೆ |
ಎಳೆಯ ಲಂಬೋದರನು ||
ಚೆಲುವನನೊಡಗೊಂಡು | ನಲವಿಂದ ಆಡುತ್ತ |
ಕಳೆಯುವ ದಿನಗಳನು || 10 ||

ಅಗಜೆಯ ನುಡಿ ಕೇಳಿ ಮೃಗಧರನುಸುರಿದ |
ಮಗನ ಸಂತಸಗೊಳಿಸೆ ||
ಮೃಗವಿಲೋಚನೆ ಪ್ರತಿ | ಮೆಗೆ ಜೀವವನ್ನೀವ |
ಬಗೆಯ ನೀನದನೀಕ್ಷಿಸೆ || 11 ||
ಎಂದು ಕೃಪಾದೃಷ್ಟಿ | ಯಿಂದ ಅಮೃತರಸ |
ಕಂದುಕೊರಳ ಸೂಸಿದಾ ||
ಅಂದು ಪ್ರತಿಮೆ ಜೀವ | ಪೊಂದಿ ಭರದಿ ನಡೆ |
ತಂದುದೇನೆಂಬೆನದ || 12 ||
ಕಂದರ್ಪನಾಭಸ್ಮ | ದಿಂದಾದ ಕಾರಣ |
ಸುಂದರಾಂಗವ ತಳೆದು ||
ಇಂದುಧರನ ಕೃಪೆ | ಯಿಂದ ಭಾಸ್ಕರ ತೇಜ |
ದಿಂದ ಶೋಭಿಸಿದನಂದು || 13 ||
ಪರಮ ಸಾಹಸಿಯನ್ನು | ಪರಿಕಿಸಿ ನಂದಿಕೇ |
ಶ್ವರ ರುದ್ರ ಮಂತ್ರವನು ||
ಕರುಣಿಸುತಲಿದರಿಂದ | ಹರನ ನೀ ನುತಿಸೆನೆ |
ಹರುಷದೊಳೈತಂದನು || 14 ||
ಭಕ್ತಿಭಾವದಿ ನಮಿಸುತ್ತಲೆ ನುತಿಸಿದ |
ಚಿತ್ತಜಾಂತಕನೆ ದೇವ ||
ಮೃತ್ಯುಂಜಯನೆ ವರ | ಕೃತ್ತಿವಾಸನೆ ಸ್ವಾಮಿ |
ಭಕ್ತಜನರ ಸಂಜೀವ ||15 ||
ಕಂಡದನಾನಂದಿ ಕೊಂಡಾಡಿದ ನೆರೆ |
ಭಂಡ್ ಭಂಡ್ ಎನ್ನುತಲೆ ಕೇಳಿ ||
ಖಂಡಪರಶು ಮುದಗೊಂಡನೀತನು |
ಭಂಡಾಸುರನೆನುತ್ತಲಿ || 16 ||

**ಶಾರ್ದೂಲ ವಿಕ್ರೀಡಿತ ವೃತ್ತ**

ಶ್ರೀದೇವೀ ಲಲಿತಾಂಬೆ ದಿವ್ಯಚರಿತೇ ಶ್ರೀಚಕ್ರ ಮಧ್ಯಸ್ಥಿತೇ |
ವೇದಾರಾಧ್ಯೆ ಸಹಸ್ರಭಾನು ಸದೃಶೇ ತ್ರ್ಯನೇತ್ರ ಸಂಶೋಭಿತೇ ||
ಬಾಧಾರಿಷ್ಟಗಳಂ ನಿವಾರಿಸುತ ಹೇ ಶ್ರೀ ರಾಜರಾಜೇಶ್ವರೀ |
ಪಾದದ್ವಂದ್ವಕೆ ಭಕ್ತಿಯಿಂದ ಮಣಿವೆನ್ನಂ ಪಾಲಿಸೌ ಸರ್ವದಾ || 17 ||

**ವಾರ್ಧಕ**

ಗಿರಿಜಾತೆ ಹರುಷದಲಿ ಕರೆದು ಲಂಬೋದರನ |
ತರಳ ಭಂಡಾಸುರನ ನಿರತ ನೀನೊಡಗೊಂಡು |
ನೆರೆದಾಟ ಪಾಠಗಳೊಳೆರಕವಾಗಿಹುದೆನುತ ಒರೆಯಲದ ಕೇಳಿ ಮುದದಿ ||
ಹರುಷದಿಂ ಹರಗಿರಿಜೆಯರಿಗೆರಗಿ ನಡೆತಂದು |
ಎರಕವಾಗಿರೆ ನಿತ್ಯಭೋಜನದೊಳು ವಿ |
ಹರಣ ಕ್ರೀಡನದಿ ಸಹ ಧರೆಗೆ ನೂತನವೆಂಬ ತೆರದಿಂದ ಮೆರೆದೀರ್ದರು || 18 ||

**ಸುರುಟಿ - ಏಕ**

ಅರ್ತಿಯೊಳವರಿರಲು | ತ್ರಿದಶರ |
ಮೊತ್ತ ಪ್ರದೋಷದೊಳು ||
ಕೃತ್ತಿವಾಸನನು ಭಕ್ತಿಯಿಂದ ನುತಿ |
ಸುತ್ತಿರಲದ ಕಾಣುತ್ತ ಕೈಲಾಸದಿ || 19 ||
ಪರಿಕಿಸಿ ದೂರದಲಿ | ಭಂಡಾ |
ಸುರನು ಭ್ರಮೆಯ ತಾಳಿ ||
ಮೆರೆವ ಸಂಪದಕೆ | ಕರೆದಾಕ್ಷಣದಲಿ |
ಕರಿವದನದವ | ಗೊರೆದ ಚೋದ್ಯದಲಿ || 20 ||

ಯಾರ್ರೈ ಗಣನಾಥ | ಇದು ಮಿತ್ರನೆ |
ಭೂರಿ ಭಾಗ್ಯ ಭರಿತ ||
ಈ ರೀತಿಯ ಸಿರಿ | ಸೇರಿತೆಂತಿವರ |
ವಾರಣಾಸ್ಯ ಸು | ವಿಚಾರಿಯೆ ತಿಳುಹೈ || 21 ||
ಲಾಲಿಪುದೆನ್ನ ಸಖ | ತ್ರಿಜಗದಿ |
ಮೇಲೆನಿಸಿಹ ನಾಕ ||
ಪಾಲಕರ್ರೈ ಫಣಿಮಾಲನು ಸ್ವರ್ಗವ |
ಪಾಲಿಸಿಹನು ಕರು | ಣಾಳು ತ್ರಿದಶರಿಗೆ || 22 ||
ನಿಶ್ಚಲ ತಪಗೈದು | ಹರನನು |
ಮೆಚ್ಚಿಸುತಲೆ ಪಡೆದು ||
ಉಚ್ಚ ಪದವಿಯಲಿ ಸಚ್ಚರಿತರಿಹರು |
ನಿಶ್ಚಯವಿದು ತಪ | ಕಲ್ಪವೃಕ್ಷವೈ || 23 ||

**ಸೌರಾಷ್ಟ್ರ - ತ್ರಿವುಡೆ**

ಕರಿವದನೆಂಬುದನು ಭಂಡಾ |
ಸುರನು ಲಾಲಿಸಿ ಮನದಿ ಬಗೆದನು |
ಹರನ ತಪದಲಿ ಮೆಚ್ಚಿಸುವೆ ನಾ | ಹರುಷದಿಂದ || 24 ||
ಬಡವನಾಗಿಹೆ ಶಿವನ ವರದಲಿ |
ಪಡೆದು ಸಂಪದಗಳನು ಸುಮನಸ |
ರೊಡೆಯನನು ಮಿಗಿಸುವೆನನುಜ್ಞೆಯ | ಕೊಡು ಗಣೇಶ || 25 ||
ಲೇಸು ಕಾರ್ಯವು ಸಖನೆ ನಿನಗೆ ಮ |
ಹೇಶನೊಲಿಯಲೆನುತ್ತ ಹರಸುತ |
ತೋಷದಲಿ ಕಳುಹಿಸಿದನಾ ವಿ | ಘ್ನೇಶನವನ || 26 ||
ಸಾರಿ ಭಂಡಾಸುರನು ಗಂಗಾ |
ತೀರದಲಿ ಶುಚಿಯಾಗಿ ಮಿಂದು ಪು |
ರಾರಿಯನು ತಪಿಸುತ್ತಲಿರ್ದನು | ಧೀರನಲ್ಲಿ || 27 ||
ಉರಿಗೊಳಿಸಿದಗ್ನಿಯಲಿ ತನ್ನಯ |
ಶಿರವನೂರಿದ ತೊರೆದು ವಿಷಯವ |
ನೆರೆ ಜಪಿಸುತಲೆ ರುದ್ರಮಂತ್ರವ | ಸ್ಥಿರ ಮನದಲಿ || 28 ||
ಸರಿದವೈ ಮೂವತ್ತು ಸಾವಿರ |
ವರುಷ ತ್ರೈಜಗ ತಪದಿ ಸುಡುತಿರೆ |
ಹರನು ಮೈದೋರುತ್ತ ಭಂಡಾ | ಸುರನೊಳೆಂದ || 29 ||

**ಭೀಮಪಲಾಸ್ - ರೂಪಕ**

ಧಿರುರೆ ಮೆಚ್ಚಿದೆ ಭಂಡಾಸುರ ಘನ ತಪಕೆ | ಅ |
ಚ್ಚರಿಯಾಂತೆ ಮಗನೆ ನಾ ಮನದಿ ||
ಉರಿಗೊಳುತಿದೆ ಜಗ | ತೊರೆದು ತಪವ ಬೇಗ |
ಅರುಹು ಮನ | ದಿರವ ದಿಟದಿ || 30 ||
ಶಂಭು ಸದಾಶಿವ ಕಂಬುಕಂಧರ ದೇವ |
ನಂಬಿದ ಭಕ್ತರ ಪೊರೆವ ||
ನೆಂಬ ಬಿರುದು ನಿನ | ಗೆಂಬುದ ಬಲ್ಲೆ ತ್ರಿ |
ಯಂಬಕ ಕೇಳು ಬಿನ್ನಪವಾ || 31 ||
ಸುರನರೋರಗ ಸಂ | ಗರದಿ ಗೆಲುವ ಶಕ್ತಿ |
ಧುರಕೆ ನಿಂದವನರ್ಥ ಬಲವು ||
ಬರುವಂತೆನಗೆ ಹರಿಹರ ಕಮಲಜರೆಲ್ಲ |
ರಿರುವಂತೆನ್ನಾಜ್ಞೆಯಿಂದದಲಿ || 32 ||

ಜಿಷ್ಣು ಮುಖ್ಯರನೆಲ್ಲ | ಸೃಷ್ಟಿಗೊಳಿಪ ಶಕ್ತಿ |
ಕೊಟ್ಟು ಬ್ರಹ್ಮಾಂಡ ಭೇದಿಸುವ ||
ಕಟ್ಟಾಳುತನ ಸಹ ರಕ್ಷಿಸು ನೀ ಪೊಡ |
ಮಟ್ಟೆನ್ನ ದಯದಿ ಸಾಂಬಶಿವ || 33 ||
ಇತ್ತನು ಬೇಡಿದಿಷ್ಟಾರ್ಥಗಳನು ದಾನ |
ವೋತ್ತಮ ನಾ ಮುದದಿಂದ ||
ಮೃತ್ಯುವಿಲ್ಲದೆ ಅರು | ವತ್ತು ಸಾವಿರ ವರುಷ |
ಪೃಥ್ವಿಯೊಳ್ ನೀ ಬಾಳುವುದೆಂದ || 34 ||

**ಸೌರಾಷ್ಟ್ರ - ತ್ರಿವುಡೆ**
ವಿಧುಧರನ ವರಗಳನು ಸಾಧಿಸಿ |
ಮದವ ತಳೆದನು ದಾನವನು ತ |
ನ್ನಿದುರು ನಿಲುವವರಿಲ್ಲ ತ್ರಿಜಗದಿ | ಕದನದೊಳಗೆ || 35 ||
ನುಡಿಯುತೀಪರಿ ಬಂದು ಸಕಲರ |
ನುಡಿದು ಗಜಮುಖನೊಡನೆ ಗಿರಿಜೆಗೆ |
ಪೊಡಮಡುತ ವಿಸ್ತರಿಸಲಾತನು | ಪಡೆದ ವರವಾ || 36 ||

**ಸಾಂಗತ್ಯ - ರೂಪಕ**
ಲೇಸಿದು ಮಗನೆ ಭಂಡಾಸುರ ವರವ ಮ |
ಹೇಶನಿಂದಲೆ ಪಡೆದಿಹುದು ||
ದ್ವೇಷಿಸಿದರೆ ಮುಂದೆ ವಾಸವಾದ್ಯರನು ವಿ |
ನಾಶ ಸಂಭವಿಸದೆ ಬಿಡದು || 37 ||
ದೈತ್ಯರನೇಕರು | ವೆತ್ತ ವರದಿ ಮದೋ |
ನ್ಮತ್ತರಾಗುತ ಧರ್ಮ ತೊರೆದು ||
ಪೃಥ್ವಿಸುರರ ಪೀಡಿಸುತ್ತ ದೇವರ್ಕಳಿ |
ಗಿತ್ತು ಕಷ್ಟವ ಮಡಿದಿಹರು || 38 ||
ಬಿಟ್ಟು ಕಳೆಯಬೇಕು | ದುಷ್ಟರ ಸಂಗವ |
ಘಟ್ಟನೆ ಪಾತಾಳಕೈದಿ ||
ಶ್ರೇಷ್ಠನೆನಿಸು ನಿಮ್ಮ | ಪಟ್ಟವನದನಾಳಿ |
ನಿಷ್ಠೆಯಿಂದಖಿಳ ಸಂಭ್ರಮದಿ || 39 ||
ಗಿರಿಜೆಯ ನುಡಿ ಕೇಳಿ | ಚರಣಕೆರಗಿ ಭಂಡಾ |
ಸುರನು ಹಸಾದವೆಂದೆನುತ ||
ಭರದೊಳನುಜ್ಞೆಯ | ಧರಿಸುತ್ತ ನಡೆತಂದ |
ನಿರದೆ ಪಾತಾಳಕೆಂದೆನುತ || 40 ||

**ಕೇದಾರ - ಅಷ್ಟ**
ಹರನ ಕರುಣದಿಂದ ಮೆರೆಯುತ್ತಲಿಹ ಭಂಡಾ |
ಸುರನೆಂಬ ವಾರ್ತೆಯನು ||
ಅರಿತು ಸುಜ್ಞಾನದಿ ಕರೆಸಿದನೆಲ್ಲ ದೈ |
ತ್ಯರನು ಶುಕ್ರಾಚಾರ್ಯನು || 41 ||
ಉಗ್ರಧನುವ ವಿಜಯನಿಂದ್ರಶತ್ರುವು ಅಮಿ |
ತ್ರಘ್ನ ವಿದ್ಯುನ್ಮಾಲಿಯು ||
ಉಗ್ರಕರ್ಮನು ಶ್ರುತಿಪಾರಗ ಕುಟಿಲಾಕ್ಷಾ |
ದ್ಯಗ್ರಗಣ್ಯರು ಬಂದರು || 42 ||
ಗುರುವರ ನಮ್ಮನು ಕರೆಸಿಹ ಕಾರಣ |
ಅರುಹಲು ಶೀಘ್ರದಲಿ ||
ನೆರವೇರಿಸುವೆನದ ಕರುಣಿಸಾಜ್ಞೆಯನೆನು |
ತ್ತೆರಗಿದ ಮಿತ್ರಘ್ನನು || 43 ||

ನಿಗ್ರಹಿಸುತ ಸುರವರ್ಗವ ಸಹಸದಿ |
ಸ್ವರ್ಗವನಾಳುವರೆ ||
ಆಗ್ರಹಗೊಳುತಿಹೆ ಶೀಘ್ರದಿ ಕಳುಹೆಂದು |
ಉಗ್ರಧನುವ ಮಣಿದಾ || 44 ||
ನಿನ್ನ ಕರುಣವಿರಲಿನ್ನು ಬಗೆಯೆ ಬಿಡು |
ಗಣ್ಣಾರ ನಾನೆಂದಿಗು ||
ಉನ್ನತಿಕೆಯನೋಳ್ಪುದೆನ್ನುತ ಕುಟಿಲಾಕ್ಷ |
ತನ್ನ ಶೌರ್ಯವ ಪೇಳಿದ || 45 ||

**ಕಾಪಿ - ಏಕ**
ತಾಳಿ ತಾಳಿರೆಲ್ಲ | ದೈತ್ಯರು | ಕೇಳಿರೆನ್ನ ಸೊಲ್ಲ ||
ಭೂಲೋಕದಿ ದಿತಿ | ಜಾಳಿಯು ಮುಂದಕೆ |
ಏಳಿಗೆ ಹೊಂದುವ | ಕಾಲ ಸಂಭವಿಸಿತು || 46 ||
ಭಂಡಾಸುರನೆನುವ | ಭಟರೊಳು |
ಗಂಡುಗಲಿಯು ಮೆರೆವಾ || ರಚಿಸಲ |
ಖಂಡವಾದ ತಪವಾ | ಇತ್ತಿಹ |
ಖಂಡಪರಶು ವರವಾ || ತೆರಳುತ |
ಕಂಡಾತನ ಮರೆ | ಗೊಂಡು ದಾನವರ ||
ತಂಡವ ಧರೆಯೊಳು | ಮುಂದಕೆ ಮೆರೆಸುವ || 47 ||
ಸೃಷ್ಟಿಸುವಧಿಕಾರ | ವನು ಸಹ |
ಕೊಟ್ಟಿಹ ತ್ರಿಪುರಹರ || ಹರಿ ಪರ |
ಮೇಷ್ಠಿ ಮುಖ್ಯಸುರರ | ಬಗೆಯನು |
ಶ್ರೇಷ್ಠ ಸಮರ ಧೀರ | ಬಿಡದೊ |
ಗ್ಗಟ್ಟಿನೊಳೆಲ್ಲವ | ರೊಟ್ಟಾಗುತಲೆ |
ಪಟ್ಟು ಕೀರ್ತಿಯನು | ಶ್ರೇಷ್ಠರೆಂದೆನಿಸುವ || 48 ||

**ಸಾಂಗತ್ಯ - ರೂಪಕ**
ಇಂತು ದೈತೇಯರ | ಸಂತೈಸುತಂದು ಧೀ |
ಮಂತ ಶುಕ್ರಾಚಾರ್ಯರಿರದೆ ||
ಸಂತಸದಲಿ ಖಳ | ತಿಂಥಿಣಿ ಸಹ ಬರೆ |
ತಾಂ ತಳುಹದೆ ಪಾತಾಳಕ್ಕೆ || 49 ||
ಕಂಡನವರ ಮುದಗೊಂಡನು ಮನದೊಳು |
ದ್ದಂಡ ಪ್ರಣಾಮವಗೈದು ||
ಭಂಡಾಸುರನು ಬೆಸ | ಗೊಂಡ ಶುಕ್ರನಲಿ ನೀ |
ಹಿಂಡು ದೈತ್ಯರ ಕೂಡುತಿಂದು || 50 ||
ಹರಿತಂದ ಕಾರ್ಯವ | ನೊರೆಯಲೆನ್ನಲಿ ಜೀಯ |
ಚರಣ ಸೇವೆಗೆ ಸಿದ್ಧನಿಹೆನು ||
ಕರುಣಿಪುದಾಜ್ಞೆಯ | ಕರುಣದೊಳೆನಲಾಗ |
ಲೊರೆದ ಶುಕ್ರಾಚಾರ್ಯನವನ || 51 ||

**ಸುರುಟಿ - ಏಕ**
ಭಂಡಾಸುರ ಧೀರ | ಸಮರ ಪ್ರ |
ಚಂಡ ಕುಲೋದ್ಧಾರ ||
ದಂಡಧರಾರಿಯ ಕರುಣಾಮೃತವ |
ನ್ನುಂಡು ದಾನವರ | ತಂಡವನುಳುಹಿದೆ || 52 ||
ಮೋದದಿ ಬಾಳಿನ್ನು | ಆಶೀ |
ರ್ವಾದಗೈವೆ ನಾನು ||
ಆದಿತೇಯರುರೆ ಕೆಡಹೀರ್ಪರು ಮೇ |
ಲಾದ ದಾನವರ ಶೋಣಿತಪುರವನು || 53 ||

ಕಟ್ಟಿಸು ನೀನೀಗ | ಘನತರ |
ಪಟ್ಟಣವನು ಬೇಗ ||
ಇಷ್ಟದಿ ಪಾಲಿಸು ದೈತ್ಯ ಸಂಕುಲವ |
ಸೃಷ್ಟಿ ಮೂರರೊಳ್ | ಶ್ರೇಷ್ಠನೆಂದೆನಿಸೈ || 54 ||
ಗುರುವರನಾಜ್ಞೆಯಲಿ | ಭಂಡಾ |
ಸುರನತಿ ಹರುಷದಲಿ ||
ಬರಿಸಿ ಮಯಾಸುರಗೊರೆಯೆ ವಿರಚಿಸಿದ |
ಮೆರೆವ ಪಟ್ಟಣವ | ಶೂನ್ಯಕ ಪುರವನು || 55 ||

**ಕಲ್ಯಾಣಿ - ರೂಪಕ**
ಶುಭ ಮುಹೂರ್ತದಿ ಪಟ್ಟ ಕಟ್ಟಿದ ಭಾರ್ಗವ |
ವಿಭವದಿ ಭಂಡಾಸುರನಿಗೆ ||
ಪ್ರಭುವೆಂದು ಮಂತ್ರಪೂರ್ವಕ ಕಲಶೋದಕ |
ಅಭಿಷೇಕವನು ಮಾಡಿ ಬಳಿಕ || 56 ||
ವನಜಪೀಠನು ಹಿಂದೆ ಕನಕ ಕಶ್ಯಪಗಿತ್ತ |
ದಿನಕರ ತೇಜದಿ ಮೆರೆವ ||
ಅನುಪಮ ಜೀವರತ್ನದ ಮಕುಟವ ದಾನ |
ವನ ಶಿರಕಿಟ್ಟನಾಚಾರ್ಯ || 57 ||
ಅರಿಗಳಾ ಶರವ ಹತ್ತಿರ ಸೋಕಗೊಡದಿರ್ಪ |
ಗುರುತರ ಛತ್ರವ ಧನುವ ||
ಶರಗಳ ವರ ಹಿಮ | ಕರನಂತೆ ಮೆರೆವ ಚಾ |
ಮರ ಬ್ರಹ್ಮ ನಿರ್ಮಿತಗಳನು || 58 ||
ಅಕ್ಷಯ ಮಹಿಮೆಯ ಸಿಂಹಾಸನದಿ |
ಚಕ್ಷು ತೇಜದಿ ದೈತ್ಯ ಮೆರೆದ ||
ಶುಕ್ರಾಚಾರ್ಯನ ಮತದಿಂದಲಾತಗೆ ಕುಟಿ |
ಲಾಕ್ಷ ಸೇನಾಪತಿಯಾದ || 59 ||
ಅಷ್ಟಪ್ರಧಾನರು ಮಿತ್ರಘ್ನಾದ್ಯರು ನೆರೆ |
ಕಟ್ಟಾಳುಗಳೆನಿಸಿದವರು ||
ಒಟ್ಟುಗೂಡಿರ್ದರು | ಕೋಟಿ ಸಂಖ್ಯೆಯಲಿ ನಾ |
ನೆಷ್ಟೆಂಬೆ ಖಳನ ವೈಭವವ || 60 ||

**ವಾರ್ಧಕ**
ಭಂಡಾಸುರನ ವಾರ್ತೆಯನ್ನರಿತು ಮನದಿ ಮುದ |
ಗೊಂಡು ತಾರಕನು ಭಗಿನಿಯರ ನಾಲ್ವರ ಕೂಡಿ |
ಕೊಂಡು ನಡೆತಂದು ಸನ್ಮೋಹಿನೀ ಚಿತ್ರಾಂಗಿ ಸುಂದರಿಯ ಕುಮುದೋತ್ಕರ ||
ಪುಂಡರೀಕಾಕ್ಷಿಯರ ಧಾರೆಯನ್ನೆರೆದಿತ್ತಖಂಡ ಭೂ |
ಮಂಡಲಗಳಲಿ ತನ್ನ ಹದಿನೆಂಟು ಬ್ರ |
ಹ್ಮಾಂಡಗಳ ವರದಕ್ಷಿಣೆಯ ಸಹಿತ ಮನ್ನಿಸುತ ಸಕಲರಂ ಬೀಳ್ಕೊಂಡನು || 61 ||

**ಕಾಂಬೋಧಿ - ಝಂಪೆ**
ತಿಳುಹಿದನು ನೀತಿಗಳ | ಬಳಿಕ ಶುಕ್ರಾಚಾರ್ಯ |
ನೊಲಿದು ದಾನವತಿಲಕ ಕೇಳು ||
ಇಳೆಯಲಿ ಸದಾಚಾರ | ಗಳಲಿ ಸತ್ಕೀರ್ತಿಯನು |
ತಳೆದರದು ಮೇಲೆನಿಪ ಬಾಳು || 62 ||
ನಿತ್ಯದಲಿ ಶಿವಪೂಜೆ | ಮತ್ತೆ ವೇದಾಧ್ಯಯನ |
ಮೃತ್ಯುಹರನುಪದೇಶವಿತ್ತ ||
ಶಾಸ್ತ್ರಾನುಸಾರ ಅನು | ವರ್ತಿಸುತ ಬಿಡದಗ್ನಿ |
ಹೋತ್ರಾದಿಗಳನು ನಡೆಸುತ್ತ || 63 ||

ಯಾಗಾದಿಗಳ ಹವಿ | ರ್ಭಾಗಗಳನೀವುದನು |
ರಾಗದಿಂ ದೇವತೆಗಳಿಂಗೆ ||
ನೀಗದೆ ಸದಾಚಾರ ನಾರಿಯರ ಮೋಹಕೊಳ |
ಗಾಗಿ ಕೆಡದಿಹುದು ಧರ್ಮದಲಿ || 64 ||
ಕರ್ಮಕಾಂಡ ಜ್ಞಾನಕಾಂಡ ಚಿಂತನೆಯ |
ನಿರ್ಮಲದ ಮನದಿ ಮಾಡಿ ಜಗದಿ ||
ಧರ್ಮಾತ್ಮನೆಂದೆನಿಸಿ | ತ್ರೈಮೂರ್ತಿಗಳಿಗೆ ಸಹ |
ನಿಮ್ಮ ಗೆಲಲರಿದು ಸಂಗರದಿ || 65 ||

**ಭಾಮಿನಿ**
ದೈತ್ಯರೆಲ್ಲರು ಮೀರದಿರ್ದರು |
ಸತ್ಯ ಧರ್ಮಗಳನ್ನು ಗುರುವರ |
ನಿತ್ತ ನೇಮದ ತೆರದಿ ನಡೆತರೆ ಶೂನ್ಯಕಾಪುರವು ||
ಸತ್ವದಲಿ ಶೋಭಿಸಿತು ಮೆರೆವ ಸ |
ವಿತ್ರ ಋಷ್ಯಾಶ್ರಮದ ತೆರದಲಿ |
ದೈತ್ಯಸಂಕುಲ ಬಂದು ಬೋಧಿಸುತೀರ್ದರಡಿಗಡಿಗೆ || 66 ||

**ಬಿಲಹರಿ - ಅಷ್ಟ**
ಕೇಳು ಭಂಡಾಸುರ ನುಡಿಯ | ಸುವಿ |
ಶಾಲ ಕೀರ್ತಿಯುತ ದಾನವ ಕುಲವರ್ಯ ||
ಗೋಳಿಡುತಿರ್ದ ದಿತಿಜರ | ಕುಲ |
ದೇಳಿಗೆಯಾಯ್ತು ನಿನ್ನಿಂದ ನಮ್ಮವರ || 67 ||
ಆದಿಯೊಳ್ ರಕ್ಷಿಪೆವೆನುತ | ಪೇಳ |
ಲಾ ದಯಾನಿಧಿ ಬೊಮ್ಮ ನಮಗೊಲಿದಿತ್ತ ||
ಮೇದಿನಿಗಳ ದೊರೆತನವ | ಬಳಿ |
ಕಾದುದು ಪೆಸರು ರಾಕ್ಷಸರು ನಾವೆನುವ || 68 ||
ಮರೆದಿರೆ ದೈತ್ಯೇಯರಿಂತು | ತ್ರಿದ |
ಶರ ಪಕ್ಷದಲಿ ಕಪಟಿಗ ಹರಿನಿಂದು ||
ಸುರರಿಗಿತ್ತನು ನಾಕವನ್ನು | ನಮ್ಮ |
ವರಿಗೆ ಮೋಸವಮಾಡಿ ಪೇಳ್ವುದೇನದನು || 69 ||
ಕಡಲ ಕಡೆದಡಮೃತವನು | ಉಣ |
ಬಡಿಸಿ ವಂಚಿಸಿ ಯಾತುಧಾನರನು ||
ಬಿಡುಗಣ್ಣರಿಗೆ ದೈತ್ಯಕುಲವ | ನಾಶ |
ಪಡಿಸಿ ಕಪಟದಿ ಗರ್ವದಿಂ ಹರಿ ಮೆರೆವ || 70 ||
ಪರಿಪೂರ್ಣ ಪ್ರಬಲರಾಗಿರಲು | ನಾವು |
ಸುರರ ಬಡಿದು ನಾಕವನ್ನಾಳದಿರಲು ||
ಕೊರತೆ ನಮಗೆ ಪಿತೃಋಣವ | ಪರಿ |
ಹರಿಸಲು ಗೆಲಿದು ಸ್ವರ್ಗವ ವಶಗೈವ || 71 ||

**ಭೈರವಿ - ಅಷ್ಟ**
ದೈತ್ಯರ ನುಡಿಗಳನು | ಲಾಲಿಸಿ ಖತಿ |
ವೆತ್ತು ಭಂಡಾಸುರನು ||
ವ್ಯರ್ಥ ಬಿಡೆನು ಸುರ | ಮೊತ್ತವನಾ ಸವ |
ರುತ್ತ ನಾಶವ ಮಾಳ್ಪೆನು || 72 ||
ಅದ್ಭುತ ವಿಕ್ರಮರ | ನೆರಹಿಗೊಂಡು |
ಯುದ್ಧದಿ ಭೂಭುಜರ ||
ಗೆದ್ದು ಕಿಂಪುರುಷ ಖಂಡವ ದಾಟಿ ಬಂದ ಸ |
ಮುದ್ರ ಘೋಷದಲಿ ಧೀರ || 73 ||

ಹರಿವರ್ಷ ಖಂಡದೊಳು | ಬೀಡನ್ನು ಬಿ |
ಟ್ಟಿರುವರ ಮರ್ದಿಸಲು ||
ತರಹರಗೊಳುತಲಿ ಚರರೆಲ್ಲ ನಡೆತಂದು |
ಒರೆದರು ಸುರಪನೊಳು || 74 ||

**ಮಾರವಿ - ಏಕ**

ಭಂಡಾಸುರನುಪಹತಿಯ ಕೇಳಿ ಖತಿ |
ಗೊಂಡು ಪುರಂದರನು ||
ಹಿಂಡುವೆ ದೈತ್ಯರ ತಂಡವ ನಾ |
ನೊಡಗೊಂಡು ಸುಮನಸರನು || 75 ||
ಮುತ್ತಿದ ದೈತ್ಯರ ಮೊತ್ತವ ತಲೆಸವ |
ರುತ್ತಲೆ ನಡೆತರಲು ||
ದೈತ್ಯ ಭಂಡ ಖತಿ | ವೆತ್ತು ತಡೆಯೆ ಕಾ |
ಣುತ್ತೆಂದನವನೊಳು || 76 ||
ದುರುಳನ್ಯಾರು ಹರಿವರ್ಷ ಖಂಡಕ್ಕೈ |
ತರುತಲೆ ನಮ್ಮವರ ||
ಪರಿಪರಿ ಪೀಡಿಸಿ | ಪರಿಭವಗೊಳಿಸಿದ |
ಪರಿಯೇನುಸುರದರ || 77 ||
ವಾಸವ ಕೇಳ್ ಭಂಡಾಸುರ ಸಮರದಿ |
ಘಾಸಿಗೈದು ಸುರರ ||
ತೋಷದೊಳಾಳುವನೈಸೆ ನಾಕವನು |
ಲೇಸಾಗದು ಸಮರ || 78 ||
ಮತಿವಿಕಳನೆ ಶತ | ಕ್ರತುಗಳಿಂದ ಸುರ |
ಪತಿತನವನು ಪಡೆದೆ ||
ದಿತಿಜರು ಮತ್ಸರಿಸುತ ಬಯಸುವದನು |
ಚಿತವು ಸಾರಿ ನುಡಿದೆ || 79 ||
ಹಕ್ಕಿಯನೇರಿಹ | ಠಕ್ಕನು ಕಪಟದಿ |
ರಕ್ಷಿಸುವನು ನಿಮ್ಮ ||
ರಕ್ಕಸರನು ತರಿ | ದಿಕ್ಕಿಹ ಪೂರ್ವದಿ |
ಈಕ್ಷಿಪೆನಾಹಮ್ಮ || 80 ||

**ಭಾಮಿನಿ**

ಸೊಕ್ಕ ತೋರುತ ಉಭಯ ಶರಧಿಗ |
ಳುಕ್ಕಿ ಹೊಯ್ದಾಡುವ ತೆರದಲಿ ಪ |
ರಾಕ್ರಮದಿ ಕಾದಾಡುತ್ತಿರಲು ಸುರಾಸುರರು ಕೂಡಿ ||
ಸಿಕ್ಕಲರಿಯದು ಜಯ ಸುರಪಗೆಂ |
ದಾಕ್ಷಣವೆ ನಡೆತಂದು ಕಮಲಜ |
ರಕ್ಕಸರ ಸಂತೈಸಿ ಭಂಡಾಸುರನೊಳಿಂತೆಂದ || 81 ||

**ಬೇಹಾಗ್ - ಏಕ**

ದನುಜತಿಲಕ ಭಂಡಾಸುರ ಸೈರಿಸು |
ನಿನಗೆಣೆಯೇ ಸುರಸಂಕುಲ ||
ರಣ ವಿಕ್ರಮಿ ಬಿನುಗರ ಗೆಲಿದರೆ ಮೇ |
ದಿನಿಯೊಳ್ ಕೀರ್ತಿಯು ನಿನಗಿಲ್ಲ || 82 ||
ಫಣಿಭೂಷಣನೊಲುಮೆಯ ಪಡೆದಾತನ |
ಘನತೆಗೆ ಕುಂದಿದು ಪುಸಿಯಲ್ಲ ||
ಅನಿಮಿಷರಲಿ ಸಂಧಾನವ ಮಾಡಿಕೊ |
ಸನುಮತದಿಂದಾಲಿಸಿ ಸೊಲ್ಲ || 83 ||

ಭೂಲೋಕವ ಪಾತಾಳವ ಸಹ ನೀ |
ಪಾಲಿಸುತಿರು ವೈಭವದಿಂದ ||
ಆಳುತ ನಾಕವ ನಿನ್ನಾಧೀನದಿ |
ಬಾಳಲಿ ನಿರತ ತ್ರಿದಶವೃಂದ || 84 ||
ಲೀಲೆಯೊಳೀವರು ಕಪ್ಪವ ಬಿಡು ಕ |
ಟ್ಟಾಳು ವೈರವನು ತ್ಯಜಿಸೆಂದು ||
ಕೇಳು ನಿನಗೆ ಬೇಕಾದ ಕರವನೆನೆ |
ತಾಳಿ ಮುದವ ದಾನವನೊರೆದ || 85 ||

**ವಾರ್ಧಕ**
ವಾಣಿರಮಣನೆ ನಿನ್ನ ನುಡಿ ಮಾನ್ಯವೆನಗೆ ಗೀ |
ರ್ವಾಣರೀವುದು ನಂದನವನಪ್ಸರೆಯರ ಇಂ |
ದ್ರಾಣಿಯಂ ಸಹಿತ ಕಪ್ಪವ ಬಳಿಕ ಸಂಧಾನಕೊಪ್ಪುವೆನು ನಾನೆನುತಲಿ ||
ದಾನವನು ನುಡಿಯೆ ಕಿಡಿಕಿಡಿಯಾಗಿ ಕಮಲಜಂ |
ಏನನಾಡಿದೆ ದುಷ್ಟ ಮತಿಹೀನ ಮದದೊಳಿಂ |
ದ್ರಾಣಿಯಂ ಕೇಳುವುದೆ ನಿನ್ನ ಪೆಸರಿಗೆ ತಕ್ಕ ನುಡಿದೆ ಫಡ ತೊಲಗೆಂದನು || 86 ||
ತಳೆಯಲಂತರ್ಧಾನವಂ ಕಮಲಸಂಜಾತ |
ಖಳರು ರೋಷದಿ ಮುತ್ತಿ ತ್ರಿದಶರಂ ಸೆರೆವಿಡಿದು |
ಎಳೆದು ತಂದರು ಬಂಧಿಸುತ್ತ ಶೂನ್ಯಕಪುರಕೆ ಬಲವೈರಿ ಮುಖ್ಯರನ್ನು ||
ಬಲುತರದ ಬವಣೆಗಳನಿತ್ತು ಬಂಡಿಗಳನ್ನು |
ಎಳೆಯಿಸಿದರಖಿಳ ಭಾರಗಳನ್ನು ಹೊರಿಸಿದರು |
ಬಳಲುತ್ತ ತ್ರಿದಶರೆಲ್ಲರು ಸೇವಿಸುತ್ತಿರ್ದರಾ ಖಳರನನುದಿನದಲಿ || 87 ||

**ತೋಡಿ - ರೂಪಕ**
ಇತ್ತ ಪುಲೋಮಜೆಯರಿತು ಸಂಗ್ರಾಮದ |
ವಾರ್ತೆಯನತಿ ಭೀತಿಯಿಂದ ||
ಧೂರ್ತನೆನ್ನನು ಕೆಡಿಸದೆ ಬಿಡನಿದಕೇನು |
ಯತ್ನವೆನುತ ತ್ವರೆಯಿಂದ || 88 ||
ತಂದೆ ಪುಲೋಮನ ಹೊಂದಿಕೊಳ್ಳುತ ದೈತ್ಯ |
ವೃಂದವರಿಯದಂತೆ ಪೊರಟು ||
ಬಂದು ಕೈಲಾಸಕೆ ಚಂದ್ರಚೂಡನ ಸತಿ |
ಗಂದು ಭಯದಿ ಪೊಡಮಟ್ಟು || 89 ||
ಶರಣಮ್ಮ ತಾಯೆ ಶಂಕರಿ ಪರಮೇಶ್ವರಿ |
ಮರೆಗೊಂಡೆ ನಿನ್ನ ಪಾದವನು ||
ದುರುಳ ಭಂಡಾಸುರ ಧುರಕೈದಿ ತ್ರಿದಶರ |
ಸೆರೆಪಿಡಿದೊಯ್ದಿಹನವನು || 90 ||
ಧಡಿಗನವನು ಬಂದು ಕೆಡಿಸದೆ ಬಿಡನು ನಿ |
ನ್ನಡಿಗಳ ಮರೆಗೊಂಡೆನಮ್ಮ ||
ಮೃಡನರಸಿಯೆ ಮಾನ | ಕೆಡದಂತೆ ರಕ್ಷಿಸು |
ಕೊಡುತಭಯವ ತೋರಿ ಪ್ರೇಮ || 91 ||
ಎಂದು ನಮಿಸಿ ಭಕ್ತಿಯಿಂದ ಮರುಗುತಿಹ |
ಇಂದ್ರಾಣಿಗೀಯುತ್ತಲಭಯ ||
ಇಂದುಧರನ ರಾಣಿ ಎಂದಳು ಮಗಳೆ ನೀ |
ನೊಂದೆಯಾ ತಾಳಿಕೋ ಧೈರ್ಯ || 92 ||
ಮರುಕವ ಬಿಡು ನಿನ್ನ ಪೊರೆಯುವೆ ಪ್ರೇಮದಿ |
ತರುಣಿ ನೀನಿರು ಕೈಲಾಸದಲಿ ||
ದುರುಳರಳಿಯುವರು ದುಷ್ಕರ್ಮದ ಫಲದಿಂದ |
ನೆರೆನಂಬಿಕೋ ಮನದಲ್ಲಿ || 93 ||

**ಕಾಂಬೋಧಿ - ಝಂಪೆ**
ದುರುಳ ಭಂಡಾಸುರನು ತರುಣಿ ಶಚಿಯನು ಬಯಸಿ |
ಮರಳಿ ಬಂದಮರಾವತಿಯೊಳು ||
ಅರಸಿ ಕಾಣದೆ ಸತಿಯನರಿತ ಗಿರಿಜೆಯ ಪದವ |
ಮರೆಗೊಂಡ ಪದನವ ಭರದೊಳು || 94 ||
ಸೇರಿದ ಸುಧರ್ಮ ಸಭೆಯನು ಸಿಂಹವಿಷ್ಟರವ |
ನೇರಿದನು ನೇಮಿಸಿದನಂದು ||
ಘೋರದಾನವರ ದಿಕ್ಪತಿತನಕೆ ರಂಭಾದಿ |
ನಾರಿಯರನೊಡಗೂಡಿಗೊಂಡು || 95 ||
ಠಿಕ್ಕಿದನು ಎಡಭುಜವ ಪಕ್ಕನೆ ಪಡೆದನು ವಿ |
ಶುಕ್ರಾಸುರನೆನುವ ಭಟನನು ||
ದಕ್ಷಿಣ ಭುಜದಿ ಬಳಿಕ ಸೊಕ್ಕಿಹ ವಿಶುಂಗನನು |
ಆ ಕ್ಷಣದಿ ಸಹಜಾತರನ್ನು || 96 ||
ಅಣ್ಣ ನೀನೀ ತೆರದೊಳೆನ್ನ ಸೃಜಿಸಲು ಕಾರ್ಯ |
ವಿನ್ನೇನಿಹುದು ಪೇಳಲದನು ||
ನಿರ್ಣಯದಿ ಪೂರೈಸಿ ನಿನ್ನಾಣೆ ಬಹೆನು ಪೇ |
ಳೆನ್ನೊಳೆಂದು ವಿಶುಕ್ರ ನುಡಿದ || 97 ||
ಜನಿಸುವಾಗಲೆ ವಿದ್ಯೆಗಳ ಧೈರ್ಯ ಶೌರ್ಯಗಳ |
ಅನುಪಮ ಪರಾಕ್ರಮವ ಸಹಿತ ||
ಎನಗಿತ್ತು ಸೃಜಿಸಿರ್ಪ ಕಾರಣವ ಪೇಳೆಂದು |
ಮಣಿದೆಂದನವನಲಿ ವಿಶಂಗ || 98 ||
ಕೇಳಿ ಸಹಜಾತರಿರ | ಮೂಲೋಕದೊಡೆತನವು |
ಜಾಲವಲ್ಲೆನ್ನ ವಶವಿಹುದು ||
ಭೂಲೋಕವ ವಿಶುಕ್ರನಾಳುತಿರಲಿನ್ನು ಪಾ |
ತಾಳವ ವಿಶುಂಗ ಪಾಲಿಪುದು || 99 ||
ಹರುಷವಾಯ್ತಣ್ಣ ದೈ | ತ್ಯರ ಕುಲವ ಬೆಳಗಿಸಿದೆ |
ಧರೆಯ ಪಾಲಿಸುತಿಹೆನು ನಾನು ||
ಚರಣ ಕಿಂಕರನಾಗಿ ಸುರರ ಲೆಕ್ಕಿಸದೆ ನೀ |
ಪರಿಕಿಸೆಂದ ವಿಶುಕ್ರನವನು || 100 ||
ಅಡಿಗೆರಗುತ ವಿಶುಂಗ ನುಡಿದನಾ ಪಾತಾಳ |
ದೊಡೆತನದೊಳಿರ್ಪೆ ಕೇಳಣ್ಣ ||
ಪಡೆದು ನಿನ್ನಾಜ್ಞೆಯನು ಬಿಡುಗಣ್ಣರಿಂಗೆಡೆಯ |
ಗೊಡೆ ನೋಡು ನೀ ಶೌರ್ಯವನ್ನು || 101 ||
ಎಂದು ಮಣಿದವರ ತಾನಂದು ಪರಸುತ ಕಳುಹು |
ತಂದು ವಕ್ಷಸ್ಥಳವ ತಿಕ್ಕಿ ||
ಚಂದದಿಂ ಪಡೆದು ಧೂಮಿನಿಯೆನುವ ಭಗಿನಿಯ ಮ |
ದಾಂಧನಿರ್ದನು ಸಂಭ್ರಮದಲಿ || 102 ||

**ಸೌರಾಷ್ಟ್ರ - ತ್ರಿವುಡೆ**
ಭೇದಿಸುತ ಬ್ರಹ್ಮಾಂಡಗಳ ತಾ |
ನೈದಿ ಗೆಲಿದನು ಖಳ ಬಳಿಕ ನೂ |
ರೈದು ಬ್ರಹ್ಮಾಂಡಗಳನವ ವಶ | ಗೈದು ದುರುಳ || 103 ||
ಗೆಲಿದು ತ್ರೈಮೂರ್ತಿಗಳನಂಕೆಯೊ |
ಳ್ನಿಲಿಸಿಕೊಂಬೆನೆನುತ್ತ ಬಗೆದವ |
ತಳುವದೈತರೆ ಸತ್ಯಲೋಕಕೆ | ತಿಳಿದು ವಿಧಿಯು || 104 ||
ಪುರಸಹಿತಲದೃಶ್ಯನಾಗಿರೆ |
ಬರಲು ವೈಕುಂಠದಲಿ ಲಕ್ಷ್ಮೀ |
ವರನ ಕಾಣದೆ ವಿಜಯವಾಯ್ತೆಂ | ದರಿತು ದೈತ್ಯ || 105 ||

ಮುತ್ತಿದರೆ ಕೈಲಾಸವನು ಕಾ |
ಣುತ್ತ ಗಜಮುಖ ದಾನವನು ಕಡು |
ಮತ್ತನಾಗಿಹನೆಂದರಿತು ಗಣ | ಮೊತ್ತದೊಡನೆ || 106 ||
ತಡೆಯದೈತರೆ ಕಂಡು ದಾನವ |
ನೊಡನೆ ಕಳುಹೆ ವಿಭೀಷನನವ |
ನಡೆತರುತ ಗರ್ವದಲಿ ಗಜಮುಖ | ನೊಡನೆ ನುಡಿದ || 107 ||

**ಸಾಂಗತ್ಯ - ರೂಪಕ**

ಕರಿವದನನೆ ಪೋಗಿ | ಭರದಿ ನಿನ್ನಯ್ಯನೋ |
ಳಿರುಹು ದಾನವ ಸಾರ್ವಭೌಮ ||
ಹರಿತಂದಿಹನು ಭಂಡಾಸುರ ಧುರಧೀರನ |
ಮರೆಗೊಳೆ ಪೊರೆಯುವ ನಿಮ್ಮ || 108 ||
ತರುಣಿ ಶಚಿಯ ತನ್ನ | ಮರೆಯೊಳಿಟ್ಟಿಹಳಂತೆ |
ತರವಲ್ಲವಿದು ನೀನು ಪೇಳು ||
ಗಿರಿಜೆ ತಂದೊಪ್ಪಿಸದಿರೆ ನಾರಿಮಣಿಯರೀ |
ರ್ವರನೆಳೆದೊಯ್ವ ಶೌರ್ಯದೊಳು || 109 ||
ಬೆಪ್ಪನೆ ಬರಿದೆ ನಿಂತಿರ್ಪುದೇತಕೆ ನೀ ನಿ |
ನ್ನಪ್ಪನೊಳರುಹದೆಂದೆನಲು ||
ಕಪ್ಪುಗೊರಳಕುವರನು ಕರದಿಂ ಕೆನ್ನೆ |
ಗಪ್ಪಳಿಸಿದರೆ ಖಾತಿಯೊಳು || 110 ||

**ವಾರ್ಧಕ**

ಕೊರಳು ತುಂಡಾಗಿ ಧರೆಗುರುಳಿದಂ ದಾನವಂ |
ಪರಿಕಿಸುತ್ತದನು ದೈತ್ಯರು ರೋಷದಿಂ ಮುತ್ತಿ |
ದರೆ ಗಜಾನನನು ಬೊಬ್ಬಿರಿದು ಶಿವಗಣರ ನೆರಹುತ್ತ ದೈತ್ಯರ ಮುತ್ತಲು ||
ಉರಿ ಮಸಗಿ ಭಂಡನೈತರುತಲಾ ಗಣರ ಬಡಿ |
ದುರುಳಿಸಲು ಕಂಡು ಖತಿವೆರೆಸಿ ಗದೆಯಿಂ ಖಳನ |
ಶಿರಕೆರಗೆ ಗಜವದನ ಧರೆಗೆ ಮೂರ್ಛಿತನಾಗಿ ಅರೆನಿಮಿಷದಲಿ ದೈತ್ಯರು || 111 ||
ತಿಳಿದು ಮೂರ್ಛೆಯ ಖಾತಿಯಲಿ ಧರಿಸಿದಂಕುಶದಿ |
ನಿಲದೆ ತಿವಿದರೆ ಮೂರ್ಛೆ ತಳೆದ ಲಂಬೋದರಂ |
ಬಳಿಕ ಪಾರ್ವತಿ ಖಾತಿಯಲಿ ಹೂಂಕರಿಸಿ ಶಕ್ತಿ ಬಲಸಹಿತ ಭರದೊಳೈದಿ ||
ಖಳನ ಪಾಶದಿ ಕಟ್ಟಿ ಕೊಲುವೆನೆಂದಿಹ ವೇಳ್ಯ |
ದಲಿ ಬಂದು ಕಮಲಜಂ ನಿಲದೆ ಮಣಿದೆಂದನವ |
ನೆಲೆ ತಾಯೆ ಕೊಲ್ಲದಿರು ಖಳಗೆ ಹರನಿತ್ತ ವರ ತಿಳಿದು ನೋಡದ ಮನದಿ ಖಳನಿವನ ಕಳುಹೆನುತಲಿ || 112 ||

**ಭಾಮಿನಿ**

ಪತಿಯ ವರಗಳ ನೆನೆಯುತಲಿ ಪಾ |
ರ್ವತಿ ನುಡಿದಳು ಮದಾಂಧ ಖಳ ದು |
ರ್ಮತಿಯೆ ನಡೆ ಭೂಲೋಕಕೀಕ್ಷಣ ಸೆರೆಯ ಬಿಟ್ಟಿಹೆನು ||
ಹಿತದಿ ಮುಂದಕೆ ಬಂದು ನೀ ಪ |
ರ್ವತವನಿದನೇರಿದರೆ ತವ ಶಿರ |
ಕ್ಷಿತಿಗೆ ಬೀಳಲೆನುತ್ತ ಶಪಿಸುತ ದೂಡಿಸಿದಳವನ || 113 ||

**ಕಂದ**

ಕಟ್ಟಿಸಿ ಕೈಕಾಲ್ಗಳನಾ |
ದುಷ್ಟನ ಬೀಸಾಡಿಸಲ್ಕೆ ಗಿರಿಯಿಂದಾಗಂ ||
ಸೃಷ್ಟಿಗೆ ಬೀಳುತ ನೆರೆ ಕಂ |
ಗೆಟ್ಟಾ ಖಳನೈದಿ ಸೇರಿದನು ನಿಜಪುರಮಂ || 114 ||

**ಭೂಪಾಳಿ - ತ್ರಿಪುಟ**
ಇತ್ತ ವೈಕುಂಠದಲಿ ಶ್ರೀಪುರು |
ಷೋತ್ತಮನು ತಾನರಿತ ಮನದಲಿ |
ದೈತ್ಯ ಭಂಡಾಸುರನು ಬಲು ಮೆರೆ | ಯುತ್ತಲಿಹುದ || 115 ||
ನಿತ್ಯ ನೈಮಿತ್ತಿಕಗಳನು ನಡೆ |
ಸುತ್ತಲಿಹನಾಚಾರ್ಯ ಶುಕ್ರನು |
ಇತ್ತ ನೇಮದಿ ವೃದ್ಧಿಯನು ಹೊಂ | ದುತ್ತಲಿಹನು || 116 ||
ದಾನವನ ಹತಿಯಿಂದ ತ್ರಿದಶರು |
ಕ್ಷೀಣಿಸುತ್ತಿಹರಕಟ ದೈತ್ಯನ |
ಹಾನಿಗೊಳಿಸುವದೆಂತೆನುತಲಾ | ದಾನವಾರಿ || 117 ||
ಧರಣಿ ಮೂರನು ಮೋಹಗೊಳಿಸುವ |
ತರುಣಿಯೋರ್ವಳ ಸೃಜಿಸಿದನು ಶ್ರೀ |
ಹರಿಯ ಚರಣಕೆ ಮಣಿದು ಮಾನಿನಿ | ಯೊರೆದಳಂದು || 118 ||

**ಬೇಹಾಗ್ - ಏಕ**
ಪರಮ ಪುರುಷ ಮುರಹರದೇವ | ಅವ |
ಧರಿಸು ಕರುಣದಲಿ ಬಿನ್ನಪವ || ಪ ||
ಏತಕೆ ಸೃಜಿಸಿದೆ ಈ ತೆರದಲಿ ರೂ |
ಪಾತಿಶಯವನಿಂದಿತ್ತೆನಗೆ ||
ತಾತನೆ ಕಾರ್ಯವ ನೀ ತಿಳುಹುವುದು ಕೃ |
ಪಾತಿಶಯವ ಬೀರುತಲಿ ಮಿಗೆ || 119 ||
ಹರಿಣಾಂಬಕಿ ದೈತ್ಯರುಪಟಳದಿ ತರ |
ಹರಿಪುದು ತ್ರೈಜಗವದರಿಂದ ||
ತೆರಳುತ ಭಂಡಾಸುರನನು ನೀ ವಶ |
ಕರಿಸು ಮೋಹದ ಬಲೆಯಿಂದ || 120 ||
ನಿತ್ಯನೈಮಿತ್ತಿಕ ಸತ್ಕರ್ಮಗಳನು |
ದೈತ್ಯರುಳಿಯುವಂದದಿ ಮಾಡು ||
ಚಿತ್ತ ಕೆಡಿಸಿ ಕ್ಷಣಹೊತ್ತು ನಿನ್ನಗಲದೆ |
ನಿತ್ಯದೊಳಿರುವಂತೊಡಗೂಡು || 121 ||
ಚೆಲುವಿನ ಲಲನೆಯ ಬಲೆಯಲಿ ಸಿಲುಕದ |
ಬಲವಂತರಿಹರೆ ತ್ರೈಜಗದಿ ||
ಖಳನನೊಲಿಸಿ ಕ್ಷಣದಲಿ ವಶಗೊಳಿಸುವೆ |
ಕಳುಹೆನ್ನನು ಹರಸುತ ಮುದದಿ || 122 ||

**ಭಾಮಿನಿ**
ಕಳುಹಿದಂ ಬೆಂಬಲಕೆ ಹರಿಯಪ್ಸರೆಯರನೊಡ |
ಲಲನೆ ವಿಶ್ವಾಚಿಯ ಅಲಂಬುಸಾದ್ಯರ ಸಹಿತ |
ನಲವಿನಿಂ ಒಡಗೊಂಡು ಮೋಹಿನಿ ಹಿಮಾಲಯದ ಬಿಂದು ಸರಸಿಯ ತೀರದಿ ||
ಗೆಳತಿಯರ ಸಹಿತಂದು ಚಂಪಕಾವೃಕ್ಷದಡಿ |
ಯಲಿ ಕುಳಿತು ಗಾಯನವ ಪಾಡುತ್ತ ಸಂಭ್ರಮದಿ |
ಖಳನ ಬರವಂ ನಿರೀಕ್ಷಿಸುತಿರ್ದರಿತ್ತ ಭಂಡಾಸುರನು ನಿಜಪುರದಲಿ || 123 ||

**ಬೇಹಾಗ್ - ಅಷ್ಟ**
ತುಹಿನಗಿರಿಯ ಬಳಿ | ವಿಹರಿಸುತಲೆ ನಡೆ |
ತಹೆನೆಂದು ಹೊರವಂಟನು ||
ವಿಹಿತದಿ ಸಚಿವರ ಸಹಿತಲೆ ಬಳಿಕ ಉ |
ತ್ಸಹದಿ ಭಂಡಾಸುರನು || 124 ||

ಬಂದು ಸರಸಿತೀರಕಂದುಬರಲು ಕರ್ಣಾ |
ನಂದ ಗಾಯನ ಕೇಳುತ್ತ ||
ಹೊಂದಿ ಭ್ರುಮೆಯ ನಡೆತಂದು ಮೋಹಿನಿಯ ಕಂ |
ಡೆಂದನು ಮನದಿ ದೈತ್ಯ || 125 ||

**ಯಮುನಾ ಕಲ್ಯಾಣಿ - ಅಷ್ಟ**
ಏನೆಂಬೆನಮಮ ಮಾನಿನಿರನ್ನೆ |ಎಣೆ |
ಗಾಣೆ ತ್ರಿಜಗ ಮನಮೋಹನ್ನೆ ||
ಏಣಾಂಕನಿಭ ವದನೆಯ ಕಂಡು |ಪಂಚ |
ಬಾಣ ಕೊಲ್ಲುವನೆಚ್ಚು ಶರಕೊಂಡು || 126 ||
ಇವಳಂಗ ಸಂಗದ ಸುಖವನ್ನು |ಅನು |
ಭವಿಸದೆ ಬಾಳಿ ನಾ ಫಲವೇನು ||
ನವಮೋಹನಾಂಗಿಯ ಬಿಡೆನೆಂದು |ಬಂದು |
ಯುವತಿಯೊಳ್ ಬೆಸಗೊಂಡನವನಂದು || 127 ||

**ಬೇಹಾಗ್ - ಏಕ**
ನೀರಜಮುಖಿ ವೈಯಾರದ ಸತಿ ನೀ |
ನ್ಯಾರೆನುತಲೆ ಪೇಳೆ ||
ವಾರಣಯಾನೆ ಕೃಪಾರಸ ಬೀರಿ ವಿ |
ಚಾರವ ತಿಳುಹಿಸು | ಕಾರುಣ್ಯವ ತಳೆ || ಪ ||
ವನಜಾಂಬಕಿ ನಿನ್ನನು ಪಡೆದಿಹ ತವ |
ಜನನಿಜನಕರ್ಯಾರು || ಈ ಪರಿ |
ಕನಕಾಂಗಿಯೆ ಕಾನನದೊಳಗಿರುವರೆ ||
ನೆನೆದ ಬಯಕೆಯುಸುರು |ಮನವನು |
ಕೆಡಿಸಿಹ ಸ್ಮರನೆಸೆಯುತ |ಕಣೆಯನು |
ಬಳಲಿಹೆನದರಿಂದಲಿ ವನಿತಾಮಣಿ ನೀ ಮನವ ಮಾಡು |
ತೆನ್ನನು ಕೂಡುತ ಸುಖವನು ಕರುಣಿಸೆಲೆ || 128 ||
ಚಂಡಪರಾಕ್ರಮಿ |ಭಂಡಾಸುರ ಬ್ರ |
ಹ್ಮಾಂಡಗಳಾಳುವೆನು |ಸುಮನಸ |
ತಂಡ ಬೆದರಿ ಕೈಗೊಂಡು ಸೇವೆಯನು |
ದಿಂಡು ಗೆಲುವದಿನ್ನು |ಕಂಡರೆ |
ನಿನಗೆಣೆಯವ ನಾ ಮುದ |ಗೊಂಡಿರೆ |
ನಡೆತರುತಲೆ ಎನ್ನಯ |ಖಂಡ ಭಾಗ್ಯಗಳನುಂಡು ನಿತ್ಯ ಸುಖ |
ಗೊಂಡು ಬಾಳುವುದೆಲೆ ಪುಂಡರೀಕಾಂಬಕಿ || 129 ||

**ಕಾಪಿ - ಏಕ**
ಕೇಳು ದೈತ್ಯತಿಲಕ |ಹೇ ರಸಿಕ |
ಕೇಳು ದೈತ್ಯತಿಲಕ ||
ಕೇಳು ದೈತ್ಯ ನಾ ಪೇಳುವ ನುಡಿಯನು |
ಆಲಸ್ಯಗೊಳದೆ ಲೀಲೆಯೊಳೆಲ್ಲವ || ಪ ||
ಪೆತ್ತವರನ್ನರಿಯೆ |ಸುಜನರು |
ಎತ್ತಿ ಮುದದಿ ಪೊರೆಯೆ |ಮೋಹಿನಿಯೆ |
ನುತ್ತಲೆನ್ನ ಕರೆಯೆ |ಪ್ರಾಯ ಸ |
ಮರ್ಥೆಯಾಗಿ ಮೆರೆಯೆ |ನಾನೆರೇ |
ಚಿತ್ತಜ ಶರಹತಿವೆತ್ತು ಬಳಲಿ ಅರ |
ಸುತ್ತಲಿ ವಿಟರನು ಇತ್ತಲು ಬಂದಿಹೆ || 130 ||

ನಿನ್ನ ಕೀರ್ತಿಗಳನು | ಲಾಲಿಸು |
ತಿನ್ನೈತಂದಿಹೆನು | ವರಿಸುವ |
ನಿರ್ಣಯದಲಿ ನಾನು | ತವ ಮನ |
ದನ್ನೆಯಾಗಲಿಹೆನು | ಅರೆಚಣ |
ಎನ್ನಗಲದೆ ಸುಖವನ್ನೀವೆನೆನುತ |
ನಿರ್ಣಯ ಭಾಷೆಯನಿತ್ತರೆ ಬಹೆ ದಿಟ || 131 ||

**ಸಾಂಗತ್ಯ - ರೂಪಕ**

ಚಂಚಲಾಕ್ಷಿಯೆ ಕೇಳು | ವಂಚನೆ ಮಾತಲ್ಲ |
ಪಂಚಬಾಣನ ಕೇಳಿಯೊಳಗೆ ||
ಮಿಂಚು ಬಳ್ಳಿಯ ಅರಸಂಚೆ ಗಮನೆ ನಾ ನಿ |
ರ್ವಂಚನೆಯಲಿ ಮುದಗೊಳಿಪೆ || 132 ||
ಕ್ಷಣಕಾಲ ಅಗಲದೆಂ | ದೆನುತ ನಂಬಿಸುತ ಮೋ |
ಹಿನಿಯೊಡಗೂಡುತ್ತೈತಂದ ||
ದನುಜೇಶ ಸಚಿವರಾ | ಕ್ಷಣ ವಿಶ್ವಾಚಿಯ ಮುಖ್ಯ |
ರನು ಕೂಡಿದರು ಮುದದಿಂದ |
ಹಗಲಿರುಳೆನ್ನದೆ | ಮೃಗನಯನೆಯರ ಬ |
ಲೆಗೆ ಸಿಕ್ಕಿರಮಿಸಿದರವರು ||
ಬಗೆಯದೆ ನಿತ್ಯಾಹ್ನಿಕಗಳನು ತ್ಯಜಿಸಿ ಸು |
ಖಿಗಳಾದೆವೆಂದು ಹಿಗ್ಗಿದರು || 133 ||

**ಸೌರಾಷ್ಟ್ರ - ತ್ರಿವುಡೆ**

ಸುರಪ ಮುಖ್ಯಾಮರರು ಭಂಡಾ |
ಸುರನ ಹಿಂಸೆಯ ತಾಳಲಾರದೆ |
ಮರುಗಿ ಗಿರಿಕಾನನಗಳಲಿ ಸಂ | ಚರಿಸುತಿರಲು || 134 ||
ಕಾಣುತೊಂದಿನ ಗೀಷ್ಪತಿಯ ಗೀ |
ರ್ವಾಣಪತಿ ಮರುಗುತ್ತ ವಂದಿಸಿ |
ಆನಲಾರದ ಕಷ್ಟವಿನ್ನಿದ | ಕೇನು ಯತ್ನ || 135 ||
ತೋರಿ ಪಥವನು ರಕ್ಷಿಸೆಂದು ಬ |
ಲಾರಿ ಮರುಗುತ ನುಡಿಯಲೊಡಲು |
ಕ್ಕೇರಿ ಕರುಣದಿ ನುಡಿದ ಧೀಷಣ | ಧೈರ್ಯಗಳನು || 136 ||

**ಬಿಲಹರಿ - ಅಷ್ಟ**

ಮರುಗದಿರೈ ಸುರಪಾಲ | ಬಂತು |
ದುರುಳ ದೈತ್ಯರಿಗೆಲ್ಲ ಸಾಯುವ ಕಾಲ ||
ಅರುವತ್ತು ಸಾವಿರ ವರುಷ | ಪುರ |
ಹರನೊಲಿದಿತ್ತಿರೆ ತೀರಿತಾಯುಷ್ಯ || 137 ||
ಹರಿ ಕಳುಹಿದ ಮೋಹಿನಿಯೊಳು | ಮೈಯ |
ಮರೆತು ಭೋಗಿಪನು ದುಷ್ಟನು ಹಗಲಿರುಳು ||
ನಿರತ ನಿತ್ಯಾಹ್ನಿಕ ಮರೆತು | ದಾನ |
ವರ ವಿನಾಶಕೆ ಬುದ್ಧಿ ವಿಪರೀತವಾಯ್ತು || 138 ||

**ಭಾಮಿನಿ**

ಕುಂಭಿನಿಯೊಳ್ಯಾರಿಲ್ಲ ಶ್ರೀತ್ರಿಪು |
ರಾಂಬಿಕೆಯ ಹೊರತವನ ವಧಿಸಲು |
ತ್ರ್ಯಂಬಕನ ವರಬಲದಿ ನಾವದರಿಂದ ಶೀಘ್ರದಲಿ ||
ಬೆಂಬಿಡದೆ ಬಲುಭಕ್ತಿಯಲಿ ಮರೆ
ಗೊಂಬ ಜನನಿಯನೆನಲು ತ್ರಿದಶಕ |
ದಂಬ ಸಹಿತಲೆ ತೆರಳಿ ತುಹಿನಾಚಲಕೆ ಭರದಿಂದ || 139 ||

**ತೋಡಿ - ರೂಪಕ**
ಧೀಷಣನೊಡಗೊಂಡು ವಾಸವಾದಿಗಳು ಸ |
ರ್ವೇಶ್ವರಿ ತ್ರಿಪುರಾಂಬಿಕೆಯನು ||
ತೋಷದಿ ಭಜಿಸಲು | ಶ್ವಾಸವಾರಣೆಯೊಳೇ |
ಕಾಸನದಲಿ ಕುಳಿತುದನು || 140 ||
ಅರಿತು ಶುಕ್ರಾಚಾರ್ಯ ನೆರೆ ಜ್ಞಾನದೃಷ್ಟಿಯೊ |
ಳಿರದೆಲ್ಲ ಸುರರ ಸಾಹಸವ ||
ಭರದಿ ದಾನವರನೆಚ್ಚರಿಸಲು ಶೂನ್ಯಕ |
ಪುರಕೈದಿ ತಳೆದ ಚೋದಿಗವ || 141 ||
ವೇದಾಧ್ಯಯನ ಮೊದಲಾದ ಸ್ವಧರ್ಮದ |
ಹಾದಿಯ ಬಿಟ್ಟೆಲ್ಲ ಸ್ಮರನ ||
ಬಾಧೆಗೆ ಸಿಲುಕಿ ವಿ | ನೋದದೊಳಿರುತಿರೆ |
ಕ್ರೋಧದಿ ಕರೆದು ದಾನವನ || 142 ||
ಮಂದಮತಿಯೆ ನಿನ್ನ ಭಾಗ್ಯಕಿಂದವಸಾನ |
ಬಂದುದ ಪೇಳುವದೇನು ||
ಇಂದಿರಾಧವ ನಿಮ್ಮ ಕೆಡಿಸಲು ಕಳುಹಿದ |
ನೆಂದರಿಯದೆ ಮೋಹಿನಿಯನು || 143 ||
ಹಗಲಿರುಳೆನ್ನದೆ | ಭೋಗಿಸೆ ನಿತ್ಯಾಹ್ನಿ |
ಕಗಳನ್ನು ತೊರೆದು ಪುಣ್ಯವನು ||
ಮಿಗೆ ಕಳಕೊಂಡೆ ದೈತ್ಯಾನ್ವಯಕಿಂತು ಕೇ |
ಡಿಗನಾದೆ ಭಂಡನು ನೀನು || 144 ||
ಅಳಿದುದು ನಿಮ್ಮಯ ಪುಣ್ಯದ ಫಲವೆಂದು |
ತಿಳಿದು ಧೀಷಣನ ಮತದಲಿ ||
ಬಲವೈರಿ ಶ್ರೀ ತ್ರಿಪುರಾಂಬಿಕೆಯ |
ನೊಲಿಸಲು ತಪಗೈವ ಭಕ್ತಿಯಲಿ || 145 ||
ಆ ಮಹಾದೇವಿ ತ್ರಿದಶರಿಗೊಲಿದರೆ ನಿ |
ರ್ನಾಮವಪ್ಪುದು ದೈತ್ಯಸ್ತೋಮ ||
ಕಾಮಿನಿಯರ ಮೋಹ ತೊರೆದೇಳು ಕೆಡಿಸು ಸು |
ತ್ರಾಮಾದಿಗಳ ತಪ ಅಧಮ || 146 ||

**ಭೈರವಿ - ಅಷ್ಟ**
ಅರರೆ ತಪ್ಪಾದುದೆಂದು | ಭಂಡಾಸುರ |
ಗುರುಚರಣಕೆ ಮಣಿದು ||
ತರುಣಿಯರನು ಧಿ | ಕ್ಕರಿಸಿ ಪೊರಟ ತ್ರಿದ |
ಶರ ತಪ ಕೆಡಿಸಲೆಂದು || 147 ||

**ವಾರ್ಧಕ**
ಆದಿತೇಯರನು ಸಲಹುವೆನೆಂದು ಬಗೆದಾ ಮ |
ಹಾ ದೇವಿ ತನ್ನಾಜ್ಞೆಯಿಂದ ನಿರ್ಮಿಸಲು ಘನ |
ವಾದ ಪ್ರಾಕಾರಮಂ ಕಂಡು ದಾನವನದಂ ಮನದಿ ಕೌತುಕ ತಾಳುತ ||
ಕ್ರೋಧದಿಂದೆಚ್ಚು ಭರದಲಿ ದಿವ್ಯಶರಗಳನು |
ಭೇದಿಸಲು ಬಳಿಕೊಂದು ಮಗುಳೊಂದು ನಿರ್ಮಾಣ |
ವಾದಂತೆ ಕೆಡಹುತೀರ್ದನು ಖಳನು ಕಂಡಾಗ ಶ್ರೀದೇವಿ ಖಾತಿಯಿಂದ || 148 ||
ಕರೆದು ಜ್ವಾಲಾಮಾಲಿನೀದೇವಿಯನ್ನು ನೀ |
ಉರಿದು ಸುತ್ತಲು ಕೋಟೆಯಂತೆ ರಕ್ಷಿಸು ಸುರರ |
ಕರುಣದಿಂದಲೆನಲು ಮೂವತ್ತು ಯೋಜನದಿ ದಳ್ಳುರಿಯಂತೆ ಪ್ರಜ್ವಲಿಸಲು ||
ಪರಿಪರಿಯ ಮಂತ್ರಾಸ್ತ್ರಗಳನೆಚ್ಚು ಭಂಡನದ |
ತರಿಯಲಸದಳನಾಗಿ ನಾಚುತ್ತ ಬಳಿಕ ದೈ |
ತ್ಯರ ಕೂಡಿಕೊಂಡು ಶೂನ್ಯಕಪುರವ ಪೊಕ್ಕನೇನೆಂಬೆ ದೇವಿಯ ಮಹಿಮೆಯ || 149 ||

**ಆರಭಿ - ತ್ರಿಪುಟ**

ತರಹರಿಸೆ ದಳ್ಳುರಿಯನೀಕ್ಷಿಸೆ |
ಸುರರು ಧೀಷಣ ನುಡಿದನಂಬಾ |
ಧ್ವರದಿ ದೇವಿಯನೊಲಿಸಿಕೊಂಬುದು | ತ್ವರಿತದಿಂದ || 150 ||
ಕತ್ತರಿಸಿ ತನುವಿಂದ ಮಾಂಸವ |
ನಿತ್ತು ಪೂರ್ಣಾಹುತಿಯ ಮಾಳ್ಪುದೆ |
ನುತ್ತ ಯಾಗವ ನಡೆಸುತಿರ್ದರು | ಭಕ್ತಿಯಿಂದ || 151 ||
ಆ ಸಮಯದಲಿ ದಿವ್ಯತೇಜೋ |
ರಾಶಿ ಕಾಣಿಸೆ ಯಜ್ಞಕುಂಡದಿ |
ಭಾಸುರದ ಶ್ರೀಚಕ್ರ ಮಧ್ಯದಿ | ತೋಷದಿಂದ || 152 ||
ವ್ಯಕ್ತವಲ್ಲದ ಆದಿಶಕ್ತಿಯು |
ಭಕ್ತರನು ಸಲಹುವೆನೆನುತ್ತಾ ಪು |
ತ್ಯಕ್ಷ ಸ್ತ್ರೀರೂಪದಲಿ ಜಗತಿಗೆ | ವ್ಯಕ್ತವಾಗಿ || 153 ||
ನಿಂದಳಾ ಮಹದೇವಿಯೊಲಿದಾ |
ನಂದರಸದ ಮಹಾಬ್ಧಿಯಿಂದದಿ |
ಹೊಂದಿ ದಿನಕರಕೋಟಿ ತೇಜವ | ಸುಂದರಾಂಗಿ || 154 ||
ಕಡಿದ ಮಾಂಸವು ತುಂಬಿತಾಗಲೆ |
ಒಡಲಿನೊಳು ತ್ರಿದಶರಿಗೆ ತ್ರೈಜಗ |
ದೊಡತಿ ಕರುಣೆಯ ಮಹಿಮೆಗಳನಾ | ನುಡಿಯಲೇನು || 155 ||

**ಹಂಸಧ್ವನಿ - ಅಷ್ಟ**

ದೇವಿದರ್ಶನಕೆ ಮ | ಹಾವಿಷ್ಣು ಕಮಲಜ |
ಭಾವಜಾಂತಕ ಮುಖ್ಯರು ||
ಧಾವಿಸಿ ನಡೆತಂದ | ರಾವೇಳ್ಯ ಸನಕಾದಿ |
ದೇವಮುನಿಗಳೆಲ್ಲರು || 156 ||
ಜಯಜಯ ಜಗದಂಬಾ | ಜಯಜಯ ತ್ರಿಪುರಾಂಬಾ |
ಜಯಜಯ ಲೋಕನಾಯಕಿಯೇ |
ಜಯಜಯ ಕಾಮಾಕ್ಷಿ | ಜಯತು ಪರಾತ್ಪರೆ |
ದಯದಿಂದ ಸಲಹೆಮ್ಮ ತಾಯೆ || 157 ||

**ಆರಭಿ - ತ್ರಿಪುಟ**

ಹರಿಹರ ಬ್ರಹ್ಮಾದ್ಯರೇಳಿರಿ |
ಸುರಪಮುಖ್ಯರು ಧೈರ್ಯ ತಾಳಿರಿ |
ಚರಣದರ್ಶನವಿತ್ತು ನಿಮ್ಮನು | ಪೊರೆಯಲೆಂದು || 158 ||
ಅರ್ತಿಯಲಿ ಮಣಿದ್ವೀಪದಲಿ ನೆಲ |
ಸುತ್ತಿರುವ ತ್ರಿಪುರಾಂಬಿಕೆಯೊಲಿದು |
ಭಕ್ತಿಗೀ ಲಲಿತಾ ಸ್ವರೂಪವ | ನೆತ್ತು ಬಂದೆ || 159 ||
ಇನ್ನು ಭಯವೇತಕ್ಕೆ ಕಾರಣ |
ವನ್ನು ಪೇಳಿರಿ ಮಾನಸದಿದಕೆ |
ಖಿನ್ನರಾಗಿಹಿರೇಕೆ ತಿಳಿದಪೆ | ನಿರ್ಣಯವನು || 160 ||
ಖೂಳಭಂಡಾಸುರನುಪಟಳವ |
ಪೇಳಲೇನೆಲೆ ತಾಯೆ ನಮ್ಮನು |
ಗೋಳುಗುಡಿಸಿಹ ಸತ್ಯಧರ್ಮವ | ಬಾಳಗೆಡಹಿ || 161 ||
ಬಿಡಿರಿ ಭೀತಿಯ ದುರುಳ ಭಂಡನ |
ಕೆಡಿಸಿ ಧರ್ಮವ ಮದದಿ ಮೆರೆವನ |
ಮಡುಹಿ ನಿಮ್ಮನು ಪೊರೆವೆನೆನ್ನುತ | ಕೊಡಲಭಯವಾ || 162 ||

**ಹಂಸಧ್ವನಿ - ರೂಪಕ**
ಶ್ರೀಮಹಾದೇವಿಯ ವಾಸಕ್ಕೆನುತಲೆ |
ತಾಮರಸಾಸನನಂದು ||
ನೇಮವನೀಯಲು ವಿಶ್ವಕರ್ಮನು ದಿವ್ಯ |
ಸೀಮೆಯನೊಂದ ನಿರ್ಮಿಸಿದ || 163 ||
ಶ್ಯಾಮಲಾದೇವಿ ಬ್ರಾಹ್ಮಿ ಮಹೇಶ್ವರಿ ಮುಖ್ಯ |
ರಾ ಮುಹೂರ್ತದಿ ಯೋಗಿನಿಯರು ||
ಆ ಮಂತ್ರಾಧೀನೆ ದುರ್ಗೆಯು ಸಹ ಬಂದರು |
ಶ್ರೀಮಹಾದೇವಿಯ ನುತಿಸಿ || 164 ||

**ಸಾವೇರಿ - ಝಂಪೆ**
ಚಿಂತಿಸಿದ ಕಮಲಭವ | ನಂತರಂಗದಿ ಸೂರ್ಯ |
ನಂತೆಸೆವ ರಾಜ್ಯವಿದರ ||
ಎಂತೋರ್ವಳೇ ದೇವಿ | ಕಾಂತೆ ಲಲಿತೆಯಿರುವಳು |
ಕಾಂತನಿವಳಿಂಗಾರು ತಿಳಿಯೆ || 165 ||
ಎಂದು ಯೋಚಿಸುತಿರಲು | ಬಂದನೊಡನಾದಿ ಶಿವ |
ಕಂದರ್ಪಕೋಟಿ ರೂಪದಲಿ ||
ಹೊಂದಿ ಕಾಮೇಶ್ವರನೆಂ | ದೆಂಬ ಪೆಸರನ್ನು ಆ |
ನಂದದಲಿ ಕಂಡು ಕಮಲಜನು || 166 ||
ಮಾದೇವನೀತನಲಿ ಸಹದೇವಿಗೆಣೆಯ ಲೇ |
ಸಾದುದೆಂದೆನುತ ನಮ್ರಮ್ಮ ||
ಮೋದದಿಂ ವರಿಸಿ ನೀ | ನಾದಿ ಮೂರುತಿ ಶಿವನ |
ಸಾದರದಿ ಮುದಗೊಳಿಸು ನಮ್ಮ || 167 ||
ದೇವಿ ಕಾಮೇಶ್ವರರ | ವೈವಾಹ ಸಂಭ್ರಮವ |
ನಾವು ಕಣ್ಣಾರೆ ಕಂಡದನು ||
ಪಾವನರು ಎನೆ ಲಲಿತೆ | ಕಾಮೇಶ್ವರರು |
ತಾವೊಲಿದು ಕೊರಳ ಹಾರವನು || 168 ||
ತೊಡಿಸಿದರು ಕಂಠಕ್ಕೆ | ಒಡನಾ ವಧೂವರರ |
ಅಡರಿಸಲು ಮೆರೆವ ಮಂಟಪವ ||
ಜಡಜನಾಭನು ಧಾರೆ | ಯೆರೆಯೆ ಕಮಲಜನಿತ್ತ |
ಉಡುಗೊರೆಯ ಮೆರೆವ ಪುಷ್ಪಕವ || 169 ||

**ಹಂಸಧ್ವನಿ - ರೂಪಕ**
ಬಲವೈರಿ ಮುಖ್ಯರು | ಬಲು ಭಕ್ತಿಯಲಿ ದೇವಿ |
ಲಲಿತಾಂಬ ಕಾಮೇಶ್ವರರಿಗೆ ||
ತಳುವದಿತ್ತುಡುಗೊರೆ | ಗಳ ಮಣಿಯುತ ನುತಿ |
ಸಲು ಧನ್ಯರಾದೆವೆಂದು ಮಿಗೆ ||170 ||
ಶ್ರೀದೇವಿ ಲಲಿತಾಂಬೆ | ಆದಿತೇಯರನು ಕೃ |
ಪಾ ದೃಷ್ಟಿಯಿಂದೀಕ್ಷಿದಳು ||
ಸಾಧಿಸೆ ಸಕಲರಿಷ್ಟಾರ್ಥವ ಕಾಮಾಕ್ಷಿ ಎಂ |
ದಾದುದಾ ದೇವಿಗೆ ಪೆಸರು || 171 ||
ಮೆರೆಯೆ ಸಂಪದವೆಲ್ಲ | ಭರಿತವಾಗಿಯೆ ತ್ರಿದ |
ಶರು ಕಷ್ಟಗಳನ್ನೆಲ್ಲ ಮರೆತು ||
ಹರುಷದೊಳಿರೆ ದೇವಿರಾಜ್ಯದಿ ನಡೆತಂದ |
ಸುರಮುನಿ ನಾರದನಂದು || 172 ||
ಮಣಿದೆಂದನೆಲೆ ಜಗಜ್ಜ | ನನಿ ನಿನ್ನಯ ಲೀಲೆ |
ಅನುಪಮವೈಸೆಲೆ ತಾಯೆ ||
ಅನಿಮಿಷರಾನಂದ | ವನಧಿಯೊಳ್ ಮುಳುಗಿಸೆ |
ಘನಕಾರ್ಯಗಳ ಮರೆತಿರುವೆ || 173 ||

ವಧಿಸದೆ ಭಂಡನ | ಮುದದೊಳಿರುವರೆ ಲೋ |
ಕದ ವರ್ಣಾಶ್ರಮಧರ್ಮವಳಿದು ||
ಎದೆಗುಂದಿರುವರಾಶ್ರ | ಮದ ಋಷಿಗಳು ಹಿಂಸೆ |
ಅಧಿಕವಾಗಿದೆ ದುಷ್ಟನಿಂದ || 174 ||
ಸನ್ನಾಹದಿಂದಿರ್ಪ ನಿನ್ನಗ್ನಿ ಪ್ರಾಕಾರ |
ವನ್ನು ಮುರಿಯದೀರ್ದ ದೈತ್ಯ ||
ತನ್ನ ನಿಖಿಳ ಬಲ | ವನ್ನು ಕೂಡುತ ಧಾಳಿ |
ಯನ್ನಿಡೆ ಯೋಚಿಪನಾತ || 175 ||
ಅರಿಕೆ ಗೈದಿಹೆನಮ್ಮ ಚರಣ ಚಿತ್ತಕೆ ಮುಂದೆ |
ಸರಿದೋರಿದಂತೆ ಕಾರ್ಯವನು ||
ವಿರಚಿಸೆಂದೆನುತಲೆ ಚರಣಕ್ಕೆ ನಮಿಸುತ್ತ |
ಸುರಮುನಿನಾಥನೈದಿದನು || 176 ||

**ಸೌರಾಷ್ಟ್ರ - ತ್ರಿವುಡೆ**
ಸುರಮುನಿಯ ನುಡಿ ಕೇಳಿ ಭಂಡಾ |
ಸುರನ ವಧಿಸಲು ಮನದೊಳಾ ನಿ |
ರ್ಧರಿಸುತಲೆ ಘನಶಕ್ತಿಸೇನೆಯ | ಬರಿಸಲಂದು || 177 ||
ಏರಿ ರಣಕೋಲಾಹಲವೆನುವ |
ವಾರಣವ ಸಂಪತ್ಕರಿಯು ರಣ |
ಭೇರಿ ಮೊಳಗಲು ಬಂದಳಾ ರಣ | ಧೀರಮಣಿಯು || 178 ||
ಧರಿಸಿ ಪಾಶಾಂಕುಶಗಳನು ಬಲು |
ಭರದೊಳಶ್ವಾರೂಢೆಯಡರುತ |
ಮೆರೆವ ಅಪರಾಜಿತಹಯವ ಬಂ | ದೆರಗಿ ನಿಲಲು || 179 ||
ಶಕ್ತಿನಾಯಕಿಯರು ಮೆರೆಯೆ ಕಿರಿ |
ಚಕ್ರ ರಥದಲಿ ದಂಡನಾಥೆಯು |
ಆಕ್ಷಣದಿ ನಡೆತರಲು ಸೇನಾ | ಧ್ಯಕ್ಷೆಯಾಗಿ || 180 ||
ಆ ಮಹಾರಥಗೇಯ ಚಕ್ರದಿ |
ಶ್ಯಾಮಲಾಂಬೆಯು ಕುಳಿತು ಶಕ್ತಿ |
ಸ್ತೋಮ ಸಹಿತಾ ಮಂತ್ರಿಣಿಯು ಬರೆ | ತಾ ಮುದದಲಿ || 181 ||
ಪರಿಕಿಸುತ ಸರ್ವರನು ತಾ ಘನ |
ಹರುಷದಿಂದಲೆ ರಾಜ ರಾಜೇ |
ಶ್ವರಿಯು ಶ್ರೀಚಕ್ರವೆನುವ ರಥದಿ | ಮೆರೆದಳಾಗ || 182 ||

**ವಾರ್ಧಕ**
ವಿಸ್ತರಿಸಲೆಂತು ಶ್ರೀಚಕ್ರಮಂ ಮೆರೆವವಂ |
ತಸ್ತುಗಳು ಅದರೊಳೊಂಭತ್ತು ಶ್ರೀಲಲಿತಾಂಬೆ |
ಶಕ್ತಿದೇವಿಯರ ಪರಿವಾರ ಮೆರೆಯಲ್ಕೆ ನೂರಿಪ್ಪತ್ತು ಮಂದಿ ರಥದಿಂ ||
ಛತ್ರಚಾಮರಗಳು ವಿರಾಜಿಸುತ್ತಿರಲ್ ತ್ರೈ |
ಮೂರ್ತಿಗಳ್ ಸುರರು ಜಯಜಯವೆಂದು ಪಾಡುತಿರೆ |
ಹಸ್ತಗಳ್ ನಾಲ್ಕರಲಿ ಪಾಶಾಂಕುಶಾದಿಗಳವೆತ್ತು ರಥವನ್ನೇರಲು || 183 ||

**ಸಾಂಗತ್ಯ - ರೂಪಕ**
ಈರೀತಿಯಲಿ ಪರಿ | ವಾರಸಹಿತ ಲಲಿ |
ತಾ ರಾಜ್ಯದಿಂ ಪೊರವಂಟು ||
ವಾರಿಧಿ ಘೋಷದಿ | ಸಾರಿ ಶೂನ್ಯಕಪುರ |
ಸೇರಿ ಮುತ್ತಲು ದೇವಿಯರು ||184 ||

ಕಂಡನುತ್ಪಾತವ | ಭಂಡಾಸುರನು ಭ್ರಮೆ |
ಗೊಂಡೇನಿದೇನಿದು ಸುರಿವ ||
ಕೆಂಡದಮಳೆ ದೈತ್ಯ | ತಂಡ ಬೆದರಲು ಭೂ |
ಮಂಡಲ ಕಂಪಿಸುತಿರುವ || 185 ||
ಪರಿಯು ಚೋದಿಗವು ಮಂ | ದಿರಗಳೊಳಗೆ ನಾರಿ |
ಯರ ಸುಮಂಗಲ ಸೂತ್ರಾದಿಗಳು ||
ಧರೆಗೆ ಕಳಚಿ ಬೀಳು | ತ್ತಿರುವ ಬಗೆಯಿದು ದೈ |
ತ್ಯರ ವಿನಾಶಕೆ ಮುನ್ಸೂಚನೆಯು || 186 ||
ಯತ್ನವೇನಿದಕೆಂದು | ಚಿತ್ತದೊಳಗೆ ಯೋಚಿ |
ಸುತ್ತಿರಲಾಗ ವಿಶುಕ್ರ ||
ದೈತ್ಯನಣ್ಣಗೆ ಮಣಿಯುತ್ತಲೆ ನುಡಿದನು |
ವ್ಯರ್ಥ ಚಿಂತಿಪುದೇತಕೆನುತ || 187 ||

**ಕೇದಾರ - ಅಷ್ಟ**

ಅಣ್ಣ ಲಾಲಿಸು ಬಿಡು | ಗಣ್ಣರು ನಾವಿತ್ತ |
ಬನ್ನದಿ ಮನದಿ ನೊಂದು ||
ಅನ್ಯರ ಸಲಹುವರ | ನ್ಯಾರ ಕಾಣದೆ |
ವಹ್ನಿಯೊಳ್ ಬೀಳ್ವೆವೆಂದು ||188 ||
ಸಿದ್ಧರಾಗಿರೆ ವಹ್ನಿ | ಮಧ್ಯದಿ ನಾರಿ ತಾ |
ನೆದ್ದು ಬಂದೀರ್ಪಳಂತೆ ||
ಯುದ್ಧದಿ ದೈತ್ಯರ | ಮರ್ದಿಪೆನೆನುತಲೆ |
ಸದ್ಧೈರ್ಯ ನುಡಿದು ಕಾಂತೆ || 189 ||
ತನ್ನಂತಿರುವ ಸ್ತ್ರೀಯ | ರನ್ನು ಹುಟ್ಟಿಸಿ ಶೌರ್ಯ |
ವನ್ನು ತೋರುವೆನೆನ್ನುತ ||
ಉನ್ಮತ್ತಳಾಗಿ ಬಂದಿಹಳಂತೆ ಬರಿದೆ | ನ |
ಮ್ಮನ್ನು ಕೆಣಕುವಡಿತ್ತ || 190 ||
ಹರಿಹರ ಬ್ರಹ್ಮರು | ತರಹರಗೊಂಡಿರೆ |
ತರುಣಿಯ ಭಯವು ವ್ಯರ್ಥ ||
ಭರದಿ ಕಳುಹಲು ದೂ | ತರನಿಟ್ಟು ಪಿಡಿದೆಳೆ |
ತರುವರಾಸತಿಯನಿತ್ತ || 191 ||

**ಕಂದ**

ಎಂದು ವಿಶುಕ್ರಂ ವಿಕ್ರಮ |
ದಿಂದಾಡಿದ ಮತವನಾಲಿಸುತಂ ವಿಷಂಗಂ ||
ವಂದಿಸಿ ಪೇಳಿದ ಯೋಚಿಸಿ |
ಮುಂದಣ ಕಾರ್ಯವ ಮಾಳ್ಪುದೆನುತಾ ಖಳಗಂ || 192 ||

**ಬಿಲಹರಿ - ಅಷ್ಟ**

ಲಾಲಿಸಿ ಕೇಳೆನ್ನ ನುಡಿಯ | ಕಷ್ಟ |
ಕಾಲ ಸಂಭವಿಸಿದಂತಿದೆ ದೈತ್ಯರೊಡೆಯ ||
ಧಾಳಿ ಮಾಡಿರುವಂತ ಸತಿಯ | ನೀನು |
ಕೀಳೆಂದೆಣಿಸದೆ ಯೋಚಿಸಿ ಮಾಡು ಕಾರ್ಯ ||193 ||
ದಕ್ಷರು ಶತ್ರುಪಕ್ಷದವರು | ನೆರೆ |
ಲೆಕ್ಕಿಸದಿರರು ಪೂರ್ವದಿ ಹಿರಣ್ಯಕನು ||
ಸೊಕ್ಕಿದ ಮೃಗವೆಂದು ಬಗೆದು | ಮರ |
ಣಕ್ಕೊಳಗಾದ ನರಹರಿಯೊಳಂದು || 194 ||

ಚಂಡಿಕೆಯೆಂದೆಂಬ ನಾರಿ | ವರ |
ಗಂಡುಗಲಿಮಹಿಷಗಾದಳು ಮಾರಿ ||
ಕೊಂದು ಶಕ್ತಿಯನ್ಯಾವ ವಸ್ತು | ತಾನ |
ಖಂಡಿತವಾಗಿರ್ಪುದೋ ಯಾರಿಗೆ ಗೊತ್ತು || 195 ||
ಕಳುಹಿಸಿ ಗೂಢಚಾರರನು | ಬಲಾ |
ಬಲಗಳ ತಿಳಿದು ವಿಕ್ರಮಳಾದಡಿನ್ನು ||
ಲಲನೆಯ ಕೂಡೆ ಸಂಧಿಯನು | ಮಾಳ್ಪು |
ದೊಳಿತೆಂದು ತೋರ್ಪುದು ತವಚಿತ್ತವಿನ್ನು || 196 ||

**ಮಾರವಿ - ಏಕ**

ಕೇಳಿ ವಿಷಂಗನ ವಚನವ ಭಂಡನು |
ಪೇಳಿದನೆಲೆ ಮರುಳೆ ||
ಬಾಲೆಗೆ ಬೆದರುವ ಭಟನೆ ಮನದಿ ನೀ |
ನಾಲೋಚಿಸದೊರೆವೆ ||197 ||
ದೈತ್ಯಬಲವಿದು ಸಹಸ್ರಕ್ಷೋಹಿಣಿ |
ಸಪ್ತಸಾಗರಗಳ ||
ಬತ್ತಿಸಬಲ್ಲುದು | ಗುಟ್ಟನರಿಯೆ ಖತಿ |
ವೆತ್ತರೆ ಜಗವೆಲ್ಲ || 198 ||
ಹರಿಹರ ಕಮಲಜ ಸುರರೆಲ್ಲರು ತರ |
ಹರಗೊಂಡಿರುತಿರಲು ||
ಲಲಿತೆಯೆಂದರೆ ಕೋಮಲೆ ತಾ |
ಸರಿಯೆನಗೆಂತಹಳು || 199 ||
ಕರೆದಾಕ್ಷಣ ದುರ್ಮದನೊಡನೊರೆದನು |
ತೆರಳಿ ಸೇನೆಸಹಿತ ||
ಭರದೊಳೆಳೆದು ತಾ ತರುಣಿಯ ನೀನೆಂ |
ದಿರದಾಜ್ಞೆಯನಿತ್ತ || 200 ||

**ಭೈರವಿ - ಅಷ್ಟ**

ದೈತ್ಯನೀಯಲು ನೇಮವ | ನೆರಹಿಕೊಂಡು |
ಹತ್ತಕ್ಷೋಹಿಣಿ ಬಲವ ||
ಧೂರ್ತರ ಕಾಲಜಂಘಾದ್ಯರ ನೆರೆ ನಿಲಿ |
ಸುತ್ತ ರಕ್ಷಿಸೆ ಪುರವ || 201 ||
ಲಲಿತಾದೇವಿಯ ಸೈನ್ಯವ | ಮುತ್ತಲು ಬಂದು |
ಬಲಸಹಿತಲೆ ದಾನವ ||
ತಿಳಿದು ಸಂಪತ್ಕರಿದೇವಿಯು ಕರೆದಳು |
ತಳೆದು ಚಿತ್ತದಿ ರೋಷವ || 202 ||
ಫಡ ದನುಜಾಧಮನೆ || ಯುದ್ಧವ ನೀನು ||
ಕೊಡು ಬೇಗ ಎನ್ನೊಡನೆ ||
ಕಡುಗಲಿಯಾದರೆ | ಬಡಿದು ಬಲವ ದೆಸೆ |
ಗೆಡಿಸಲೇತಕೆ ಸುಮ್ಮನೆ || 203 ||
ನಾರಿಯೊಡನೆ ರಣವು | ಘನವೆ ತ್ರಿಪು |
ರಾರಿಗೆ ನಾವಂಜೆವು ||
ಸಾರಿ ಶೂನ್ಯಕಪುರವನು ಮುತ್ತಿ ಕೆಟ್ಟೆ ನೀ |
ಏರಿ ಶರಕೆ ಗರ್ವವು || 204 ||
ಗರ್ವವೇರಿದು ನಿಮಗೆ | ರಣದಲಿ ಸು |
ಪರ್ವರ ಗೆಲಿದ ಮ್ಯಾಗೆ ||
ಊರ್ವಿಯೊಳೆಣೆಯಿಲ್ಲವೆಂದು ತೋರಿಸು ನಿನ್ನ |
ಸರ್ವಶಕ್ತಿಯನು ಮಿಗೆ || 205 ||

ಎನಲೊಂದು ಬಾಣದಿಂದ | ಕಿರೀಟದ |
ಮಣಿಯೊಂದನು ಕೆಡಹಿದ ||
ದನುಜನು ಶೌರ್ಯದಿ ಸಂಪತ್ಕರಿ ದೇವಿ |
ಯನು ಕಂಡು ಘರ್ಜಿಸಿದ || 206 ||
ಒಡನತಿ ಖಾತಿಯೊಳು | ಎದೆಗೆ ಗುರಿ |
ಪಿಡಿದು ಬಾಣವ ಬಿಡಲು ||
ಮಡಿದ ದುರ್ಮದ ದೈತ್ಯ | ಪಡೆಯ ಶಕ್ತಿಸೇನೆ |
ಕಡಿದು ಚೂರ್ಣವ ಮಾಡಲು || 207 ||
ಅಳಿದ ದುರ್ಮದನೆಂಬುದ | ಲಾಲಿಸಿ ಭಂಡ |
ಬಲು ಖತಿಯನು ತಳೆದ ||
ಲಲನೆಯ ಬಿಡೆನೆಂದು | ಬಲು ಮಾಯಾವಿ ಕುರಂಡ |
ಖಳನನಾಕ್ಷಣ ಕರೆದ || 208 ||

**ಕಾಂಬೋಧಿ - ಝಂಪೆ**
ಮಂಡೆಯನು ಮಣಿದಾ ಕು | ರಂಡಾಸುರನು ನುಡಿದ |
ಗಂಡುಗಲಿ ದೈತ್ಯಕುಲದೊಡೆಯ ||
ಭಂಡಾಸುರನೆ ಖಾತಿ | ಗೊಂಡಂತಿರುವೆ ನೀನು |
ಕಂಡರೇನಿದೆ ಪೇಳು ಕಾರ್ಯ || 209 ||
ಏನೊರೆವೆ ಕರಂಡನೇ | ಮಾನಿನಿಯು ಮದದಿಂದ |
ಸೂನ್ಯಕಾಪುರ ಮುತ್ತಿದವಳ ||
ಚೂಣಿಯಲಿ ಕಟ್ಟಿತರೆ | ಸೇನೆಸಹ ದುರ್ಮದನ |
ತಾನಟ್ಟಿದರೆ ತರಿದಳವನ || 210 ||
ಮಡಿದನೇ ದುರ್ಮದನು | ಬಿಡು ಯೋಚನೆಯನು ನೀ |
ಕೊಡು ನೇಮವನು ಭರದೊಳೆನಗೆ ||
ಪಡೆ ಸಹಿತ ಪೋಗಿ ನಾ | ಹುಡುಗಿಯನು ಪಿಡಿದು ಹೆಡೆ |
ಮುಡಿ ಕಟ್ಟಿ ತಹೆ ನಿನ್ನ ಬಳಿಗೆ || 211 ||
ಎನುತ ನೇಮವ ಪಡೆದು | ದನುಜ ಸೇನೆಯ ಕೂಡಿ |
ರಣಕೆ ಬರೆ ದಾನವನ ಕಂಡು ||
ದನುಜಗಿದಿರಾಗಿ ಅಶ್ವಾರೂಢೆ ವಿಕ್ರಮದಿ |
ಮುನಿದು ಪೇಳಿದಳು ಖಳಗಂದು || 212 ||

**ಮಾರವಿ - ಏಕ**
ದಾನವ ಫಡ ಬಲು | ಸೇನೆಯ ನೆರಹಿಸಿ |
ಮಾನಿನಿಯರೊಳಿಂದು ||
ಚೂಣಿಗೈದೆ ಮತಿ | ಹೀನನೆ ಪೌರುಷ |
ಕಾಣಿಸೆನ್ನೊಳಿಂದು || 213 ||
ಫಡ ಮಾನಿನಿ ಎನ್ನನುಜ ದುರ್ಮದನ |
ಮಡುಹಿದವಳ್ಯಾರು ||
ಕಡಿದಾಕೆಯ ಶಿರ ರಣದೇವತೆಗುಣ |
ಬಡಿಸುವೆ ಬರಲಿದಿರು || 214 ||
ಅನುಜನ ಬಳಿಗಣ್ಣನ ಕಳುಹುವೆನೀ |
ಕ್ಷಣ ಧರ್ಮವ ತ್ಯಜಿಸಿ ||
ಘನಮದದಿಂದಿಹ ಬಿನುಗು ದೈತ್ಯ ನೋ |
ಡನುವರದಲಿ ಸೆಣಸಿ || 215 ||
ಸೊಕ್ಕಿನ ಹೆಣ್ಣೇ ಪರಾಕ್ರಮವನು ನೋ |
ಡೀಕ್ಷಣ ನೀನೆಂದು ||
ಘಕ್ಕನಿಕ್ಷುಧನುವಿನ ಹೆದೆಯನು ಮುರಿ |
ದಿಕ್ಕಿದ ಖಳನಂದು || 216 ||

ಘಡ ಎನುತಲೆ ಘುಡಿಘುಡಿಸುತ ಶೂಲವ |
ದಡಿಗನೆದೆಗೆ ತಿವಿದು ||
ಕೆಡವಿ ಪಾಶದಿಂ | ದೊಡನೆ ಬಿಗಿದು ಖಳ |
ಗಡಣವರಿದಳಂದು || 217 ||

**ಸೌರಾಷ್ಟ್ರ - ತ್ರಿವುಡೆ**
ರಣದಿ ಮಡಿದ ಕರಂಡನೆಂಬುದ |
ದನುಜನಾಲಿಸಿ ಖತಿಯೊಳುಸುರಿದ |
ಬಿನುಗು ಮಾನಿನಿ ತರಿವುದೇನಿದು | ದನುಜ ಕುಲವ || 218 ||
ಸಿತಗಳಾದ್ಯರ ಲೆಕ್ಕಿಸೆನು ಹುಲು |
ಸತಿಯು ಗಣ್ಯವೆ ಎನುತ ಕರೆಸಿದ |
ನತಿಬಲನ ಕರಂಕನನು ಖಳ | ಪತಿಯು ಬಳಿಕ || 219 ||
ಪುಣ್ಯಜನ ಕುಲ ಸಾರ್ವಭೌಮನೆ |
ಎನ್ನ ಕರೆಸಿದ ಕಾರ್ಯವೇನದ |
ರನ್ನು ತಿಳುಹಲು ನಡೆಸಿ ಬರುವೆನು | ನಿರ್ಣಯವಿದು || 220 ||
ತೆರಳಿ ಮೂರಕ್ಷೋಹಿಣೀ ಬಲ |
ವೆರಸಿ ಸೇನಾಪತಿಗಳೈವರ |
ತರುಣಿಯನು ಬಂಧಿಸುತ ನೀನೆಳೆ | ತರುವುದೆಂದ || 221 ||

**ಕೇದಾರ - ಅಷ್ಟ**
ಹೂಂಕರಿಸುತಲೆ ವಿಕ್ರಮದಿಂದ ಸಮರಕೆ |
ಶಂಕಾದಿಗಳು ನಡೆದು ||
ಪಂಕಜಮುಖಿಯರ | ಬಂಕ ನಿಲ್ಲಿಸುವೆವು |
ಶಂಕಿಸದೆನುತಲಂದು || 222 ||
ಒಪ್ಪುವ ಮಾಯದಿ | ತಪ್ಪದೆ ಸೃಜಿಸಿದ |
ಸರ್ಪಿಣಿ ದೇವತೆಯ ||
ಕಪ್ಪು ಬಣ್ಣದೊಳಿರು | ತಿರ್ಪಳ ಕಳುಹಿದ |
ಅಪ್ಪಣೆ ಕೊಟ್ಟಾಕೆಯ || 223 ||
ಹೊರಸೂಸಿ ತನುವಿನಿಂದುರಗಗಳ ಖಳನು |
ಗರಳವನುಗುಳುತ್ತಲಿ ||
ಮೆರೆವ ತಕ್ಷಕ ಘನ | ತರದ ಕಾರ್ಕೋಟಕಾ |
ದ್ಯರು ಕೋಟಿ ಸಂಖ್ಯೆಯಲಿ || 224 ||

**ಭೈರವಿ - ಅಷ್ಟ**
ತಿಳಿದದ ಖಾತಿಯಲಿ | ದೇವಿಯು ಬಾಯ |
ಒಳಗಿಂದ ಸೃಜಿಸುತಲಿ ||
ತಳುವದೆ ನಕುಲೇಶ್ವರಿ | ಯನ್ನಪ್ಪಣೆಯನಿತ್ತು |
ಕಳುಹಲು ಶೀಘ್ರದಲಿ || 225 ||
ಗರುಡನನೇರುತಲಿ | ಕುಂದಣದಂತೆ |
ಮೆರೆವ ಸೌಂದರ್ಯದಲಿ ||
ವರದಂತಪಂಕ್ತಿಯು | ಮುಂಗುಸಿಗಳ ಮೂವ |
ತ್ತೆರಡು ಕೋಟಿಯ ಸೃಜಿಸಿ || 226 ||
ಕಳುಹಲಿಕ್ಕೈದಿನ ಕುಲಗಳು | ಭುಜಗ ಸಂ |
ಕುಲಗಳ ಭಕ್ಷಿಸಲು ||
ತಿಳಿದದ ಸರ್ಪಿಣಿ | ಕೊಳುಗುಳಕಿದಿರಾಗಿ |
ನಿಲೆ ನಕುಲೇಶ್ವರಿಯು || 227 ||

ಪಿಡಿದು ಧನುವ ಬರೆ | ನುಡಿದಳು ಸರ್ಪಿಣಿ |
ಬೆಡಗನ್ನು ದೋರೆ ನಿನ್ನ ||
ಮಡುಹಿ ಭುಜಂಗರ ಪಡೆಯನು ನಿನ್ನನು |
ಬಿಡೆನು ಸಂಹರಿಸದೆ ನಾ || 228 ||
ತರಿವ ಸುಭಟಳು ನೀನರಿತಿಹೆ ಕಪಟವ |
ಮೆರೆಸು ನಾನದ ನೋಳ್ಪೆನು ||
ಧುರದೊಳಗೆನುತಲೆ | ಗರುಡ ಬಾಣದಲಿ ಸಂ |
ಹರಿಸಿದಳಾಕೆಯನು || 229 ||

**ಸೌರಾಷ್ಟ್ರ - ತ್ರಿವುಡೆ**

ಕಂಡು ಸರ್ಪಿಣಿಯಳಿದುದನು ಖತಿ |
ಗೊಂಡು ಭರದಿ ಕರಂಕ ಮುಖ್ಯರು |
ಕಂಡ ನಕುಲೇಶ್ವರಿಯ ಮುಸುಕಿದ | ರಂಡಲೆಯದೆ || 230 ||
ಬಾಣಗಳನೆಸೆಯುತ್ತ ಶೌರ್ಯದಿ |
ಹಾನಿಗೊಳಿಸಲು ಮುಂಗುಸಿಗಳನು |
ಜಾಣೆ ನಕುಲಾಸ್ತ್ರದಲಿ ಸಕಲರ | ಪ್ರಾಣವುಳುಹಿ || 231||
ಮೆರೆಯೆ ಕಂಡು ಕರಂಕ ಪೇಳಿದ |
ಧಿರುರೆ ಮೆಚ್ಚಿದೆ ನಿನ್ನ ಶೌರ್ಯಕೆ |
ಪರಿಕಿಸೆನ್ನಧಟೆಂದು ಶರಗಳ | ಸುರಿಯಲಾಗ || 232 ||
ಕಡುಗಲಿಯು ನೀನಹುದೆನುತ್ತಲಿ |
ಕಡಿದಳಾತನ ಶಿರವ ಶರದಿಂ |
ಒಡನೆ ಸೇನಾಪತಿಗಳೈವರ | ಪಡೆಯನೆಲ್ಲ || 233 ||
ಪ್ರೇಮದಿಂ ನಕುಲೇಶ್ವರಿಯನಾ |
ಶ್ಯಾಮಳಾಂಬಿಕೆ ಮೆಚ್ಚಿ ಮನ್ನಿಸಿ |
ತಾ ಮುದದಿ ಕೊಡಲಂಗ ದೇವಿಯ | ನಾಮವನ್ನು || 234 ||

**ಶಂಕರಾಭರಣ - ಮಟ್ಟೆ**

ಕಲಹದಲಿ ಕರಂಕಮುಖ್ಯ |
ರಳಿದ ವಾರ್ತೆಯನ್ನು ಕೇಳಿ |
ತಳೆದು ಕೌತುಕವಿದೇನು | ಘಳಿಗೆ ಘಳಿಗೆಗೆ ||
ಕಲಹದಲಿ ಸೋಲವೆನಗೆ |
ಲಲನೆಯನ್ನು ಬಿಡೆನೆನ್ನುತ |
ಬಳಿಕಲಾ ಬಲಾಹಕಾದಿ | ಭಟರ ಬರಿಸಿದ || 235 ||
ಬಂದರಾಗ ಕೀಕಸೀಯ |
ನಂದನರು ಬಲಾಹಕಾದ್ಯ |
ರೆಂದರೆರಗಿ ದೈತ್ಯ ಏತ | ಕಿಂದು ಕರೆಸಿದೆ ||
ಚಂದದಿಂದಪ್ಪಣೆಯನಿತ್ತ |
ಡಿಂದುಧರನೆ ಮುನಿಯೆ ಬಗೆಯ |
ದೆಂದು ನಡೆಸಿಕೊಡುವೆವೆನಲಿ | ಕೆಂದನವರಲಿ || 236 ||
ಕುಂದು ಬಂತು ಜಗದಿ ದೈತ್ಯ |
ವೃಂದಕಿಂದು ನಮ್ಮಪುರಕೆ |
ಬಂದು ನಾರಿ ದಾನವರನು | ಕೊಂದು ಕೆಡಹಲು ||
ಮುಂದುವರಿದು ನಿಮ್ಮ ಮಾಯೆ |
ಯಿಂದ ಯತ್ನದಲಿ ಪಿಡಿದು ಮ |
ದಾಂಧೆಯನ್ನು ಕಟ್ಟಿ ತರುವ | ದೆಂದು ಕಳುಹಿದ || 237 ||

**ಮಾರವಿ - ಏಕ**

ವಿಕಟಾನನನು ವಿಕರ್ಣನು ಸೂಚೀ |
ಮುಖನು ಬಲಾಹಕನು ||
ಪ್ರಕಟಿಸಿ ಶೌರ್ಯವ ಪಾಲಮುಖನು ಕರ |
ಟಕನು ಕರಾಳಾಕ್ಷ || 238 ||
ಹದ್ದು ಕಾಗೆ ಕೋಳಿಗಳನ್ನೇರುತ |
ಯುದ್ಧಕೆ ಶೌರ್ಯದಲಿ ||
ಸಿದ್ಧರಾಗಿ ನಡೆತಂದರು ಶಿರಕೇ |
ರಿರ್ದಹಂಕಾರದಲಿ || 239 ||
ತರಣಿಯ ಮೆಚ್ಚಿಸಿ ವರಗಳ ಪಡೆದಿರೆ |
ದುರುಳರಕ್ಷಿಗಳಲಿ ||
ಸ್ಮರಿಸಿದಾಗ ದಿನಕರ ನೆಲಸುವವೋಲ್ |
ಉರುತರ ಭಕ್ತಿಯಲಿ || 240 ||
ಮತ್ತೆ ಸ್ಮರಿಸಲು ಗಭಸ್ತಿಯು ನೆಲಸಿದ |
ದೈತ್ಯರಕ್ಷಿಗಳೊಳು ||
ಮಿತ್ರತೇಜದೊಳು ಶಕ್ತಿಸೇನೆ ಭ್ರಮ |
ವೆತ್ತು ಮೊರೆಯನಿಡಲು || 241 ||
ಅರ್ಕನ ತೇಜದಲಿ ಕಂಗೆಡುತಿಹ |
ಶಕ್ತಿಸೇನೆಯನಿಂದಿಲಿ ||
ರಕ್ಷಿಪೆನೆನುತ ಶ್ರೀಲಲಿತಾಂಬೆ ಕಳುಹೆ ಶಿ |
ರಸ್ಕರಿಣೀ ದೇವಿಯ || 242 ||
ಘನ ತಮೋಲಿಪ್ತವೆಂಬ | ವಿಮಾನದಿ |
ರಣದಿ ದುರುಳಕದಂಬ ||
ವನು ತರಿಯುವೆನೆಂದು | ಫಣಿಶರಗಳನು ಮೋ |
ಹನ ಬಾಣಗಳ ಬಿಡಲು || 243 ||
ಅಂಥ ಶರವನೆಸೆದು ನೀ ದಾನವ |
ವೃಂದವ ತರಿವುದೆಂದು ||
ಬಂದು ತಿಳುಹೆ ದಂಡನಾಥೆಯು ನೆರೆ ಖತಿ |
ಯಿಂದೆಚ್ಚಳಧಮರನು || 244 ||
ಎಚ್ಚ ಶರಕೆ ದೈತ್ಯರು | ಕಣ್ಣುಗಳನ್ನು |
ಮುಚ್ಚಿ ಬಿಡಿಸದಾದರು ||
ಬೆಚ್ಚಿ ಬಲಾಹಕಾದಿಗಳು ಕಂಗೆಟ್ಟಿರೆ |
ಕೊಚ್ಚಿಕೆಡಹುತಾಗಲು || 245 ||
ಏಳು ಜನರ ಕಡಿದು ಶಿರಗಳನ್ನು |
ಮಾಲೆಮಾಡುತ ತಳೆದು ||
ಲೀಲೆಯೊಳಿರೆ ದಂಡನಾಥೆ ಕೊಂಡಾಡಿದ |
ಳ್ಬಾಲೆಯ ಮುದದೊಳಂದು || 246 ||

**ಸೌರಾಷ್ಟ್ರ - ತ್ರಿವುಡೆ**

ಧುರದ ವಾರ್ತೆಯನರಿತು ಭಂಡಾ |
ಸುರನು ಸೋದರರೀರ್ವರನು ಸಚಿ |
ವರನು ಕುಟಿಲಾಕ್ಷಾದ್ಯರೆಲ್ಲರ | ನೆರಹಿ ನುಡಿದ || 247 ||
ಬಾಹುಬಲ ತಪಶಕ್ತಿಗಳಿಹ ಬ |
ಲಾಹಕಾದಿ ಧುರಂಧರರ ನಿಂ |
ದಾಹವದಿ ಮಾನಿನಿಯು ತರಿದಳು | ಸಾಹಸದಲಿ || 248 ||
ಮಾನಿನಿಯರೊಳು ಸೋತರೆಂಬಪ |
ಮಾನವಾಯ್ತೆನಲಾ ವಿಶಂಗನು |
ದಾನವಾಧಿಪನೊಡನೆ ನುಡಿದ ವಿ | ಧಾನಗಳನು || 249 ||

ಚಿತ್ರವಿಟ್ಟುವಧರಿಪುದಣ್ಣನೆ |
ಯುಕ್ತಿಯಲಿ ಗೆಲಬೇಕು ಲಲಿತೆಯ |
ಶಕ್ತಿಸೇನೆಯು ಸಮರವೆಸಗುವ | ಹೊತ್ತು ನೋಡಿ || 250 ||
ತೆರಳಿ ಬೆಂಗಡೆಯಿಂದಲಾಕೆಯ |
ಸೆರೆಪಿಡಿವೆ ಕುಟಿಲಾಕ್ಷ ಮುಂಗಡೆ |
ಧುರಕೆ ನಿಂದಾ ಶಕ್ತಿಸೇನೆಯ | ತರಿಯುತಿರಲಿ || 251 ||

**ಮಾರವಿ - ಏಕ**
ಎನಲೊಡನುಸುರಿದ | ಮಣಿದಾ ಕುಟಿಲಾ |
ಕ್ಷನು ನೀ ಕಳುಹೆನ್ನ ||
ಅನುವರದೊಳಗಾ | ವನಿತಾ ಬಲವನು |
ಹನನಗೈದು ಬಹೆ ನಾ || 252 ||
ಹತ್ತಕ್ಷೋಹಿಣಿ | ದೈತ್ಯಬಲವ ಕೂ |
ಡುತ್ತ ಖಳಾಧಮನು |
ಶಕ್ತಿಸೇನೆಯನು | ಮತ್ತತನದಿ ನೆರೆ |
ಮುತ್ತಿವ ಬಂದವನು || 253 ||
ಕಂಡತಿ ಖತಿಯಲಿ | ದಂಡನಾಥೆ ಒಡ |
ಗೊಂಡು ಶ್ಯಾಮಲೆಯನು ||
ಕೆಂಡವನುಗುಳುತ | ಹಿಂಡುವೆ ದೈತ್ಯನ |
ತಂಡವ ಬಿಡೆನೆಂದು || 254 ||
ಎನುತೈತಿರುತಿರೆ | ರಣಕದ ಕುಟಿಲಾ |
ಕ್ಷನು ಕಂಡಾಕೆಯನು ||
ವನಿತೆ ನಿಲ್ಲು ರಣದಲಿ ಶಿರವರಿಯುವೆ |
ನೆನುತಲೆ ಪೇಳಿದನು || 255 ||
ತರಿಯುವೆನೆನ್ನುತ | ರೊರೆದ ಖಳರು ಯಮ |
ಪುರವನು ಹೊಕ್ಕಿದರು ||
ತೆರಳುವದಲ್ಲಿಗೆ | ನಿನ್ನನು ಕಾಣದೆ |
ತರಹರಿಸುವರವರು || 256 ||
ಅಲ್ಪಬಲರ ಗೆಲಿ | ದಿರ್ಪೆನೆನುತ ಮತಿ |
ತಪ್ಪಿ ನುಡಿವೆ ನೀನು ||
ಮುಪ್ಪುರಾಂತಕ | ದರ್ಪವ ಸಮದೊ |
ಳೊಪ್ಪುಗೊಡೆನು ನಾನು || 257 ||
ಕಲಿಗಳೊಳಗೆ ವೆಗ್ಗಳನಾದರೆ ಕೌ |
ಶಲಗಳ ಪರಿಕಿಪೆನು ||
ನಿಲುವದೆನುತ ಕೂ | ರಲಗುಗಳನ್ನೆಸೆ |
ಯಲು ಜಾರಿದ ಖಳನು || 258 ||

**ಸೌರಾಷ್ಟ್ರ - ತ್ರಿವುಡೆ**
ಮುಂಗಡೆಯೊಳತಿ ವಿಕ್ರಮದಿ ಸಮ |
ರಾಂಗಣದೊಳಿರೆ ಶಕ್ತಿ ಸೇನೆ ವಿ |
ಶಂಗ ದಮನಾದಿಗಳ ಕೂಡುತ | ಬೆಂಗಡೆಯಲಿ || 259 ||
ಗುಪ್ತದಲಿ ನಡೆತಂದು ಚರಣದ |
ಸಪ್ಪಳವು ಕೇಳಿಸದ ತೆರದಲಿ |
ಕಪ್ಪು ಬಣ್ಣದ ಕವಚಗಳ ಧರಿ | ಸೀರ್ಪ ಖಳರು || 260 ||
ಬಂದು ಬೆಂಗಡೆಯಿಂದ ಮುತ್ತಿದ |
ರಂದು ಶ್ರೀಚಕ್ರವನು ಬಾಣಗ |
ಳಿಂದ ಮುಸುಕಲು ಶಕ್ತಿದೇವಿಯ | ರಂದಗೆಟ್ಟು || 261 ||

ಹಾದಿಗಾಣದೆ ಮೊರೆಯಿಡಲು ಕಡು |
ಕ್ರೋಧದಿಂ ಕಾಮೇಶ್ವರಿಯು ಹದಿ |
ನೈದು ದೇವಿಯರೊಡನೆ ಲಲಿತೆಯ | ಪಾದಕೆರಗಿ || 262 ||

**ಮಾರವಿ - ಏಕ**

ಜನನಿಯೆ ಲಾಲಿಸು ಧುರದಲಿ ಸೋತಿಹ |
ದನುಜರು ಕಪಟದಲಿ ||
ಘನ ನಿಶಿಯಲಿ ನ | ಮ್ಮನು ಬೆಂಗಡೆಯಲಿ |
ಕೆಣಕುವರಿಂದಿನಲಿ || 263 ||
ಕತ್ತಲೆ ಮುಸುಕಿದೆ ಸತ್ವದಿ ಕಾದುವ |
ಯತ್ನ ತೋರದಿನ್ನು ||
ಶಕ್ತಿಪ್ರದಾಯಕಿ | ಯುಕ್ತಿದೋರಿ ಪೊರೆ |
ಅರ್ತಿಯೊಳೆಮ್ಮವರನು || 264 ||

**ಭಾಮಿನಿ**

ಲಾಲಿಸುತ ಲಲಿತಾಂಬೆ ಧೈರ್ಯವ |
ಪೇಳಿದಳು ಬಿಡಿ ಭಯವ ಜ್ವಾಲಾ |
ಮಾಲಿನಿಯನಾ ವಹ್ನಿವಾಹಿನಿಯರನು ಕಳುಹುವೆನು ||
ಕಾಳಗದೆಡೆಗೆ ತನುಗಳಾ ಮಹ |
ಜ್ವಾಲೆಯಲಿ ಕತ್ತಲೆಯು ಸರಿವುದು |
ಖೂಳರನು ಕಡಿದಿಕ್ಕಿರೆನ್ನಪ್ಪಣೆಯ ಪಾಲಿಸಲು || 265 ||

**ಕಾಂಬೋಧಿ - ಝಂಪೆ**

ಕಳುಹೆ ಜ್ವಾಲಾಮಾಲಿನಿಯ ವಹ್ನಿವಾಹಿನಿಯ |
ಹೊಳೆದು ದೇದೀಪ್ಯಮಾನದಲಿ ||
ಬೆಳಕನೀಯಲು ಶಕ್ತಿದೇವಿಯರು ಶೌರ್ಯದಲಿ |
ಖಳರ ಸಂಹರಿಸುತ ಭರದಲಿ || 266 ||
ಕೊಂದಳಾಕ್ಷಣ ದಮನ | ನೆಂದೆನುವ ಖಳನ ಭರ |
ದಿಂದ ಕಾಮೇಶ್ವರಿಯು ಬಳಿಕ ||
ಮುಂದರಿದು ಜ್ವಾಲಾಮಾಲಿನಿಯು ದೀರ್ಘ ಜಂಹ್ವಾದಿ |
ಮಂದಮತಿಗಳನು ತರಿದಿಡಲು || 267 ||
ರೋಷದಿಂದಲೆ ವಿಶಂಗಾಸುರನು ಘುಡುಘುಡಿಸಿ |
ತಾ ಸಮರಕನುವಾಗೆ ಬರಲು ||
ಸೂಸಿ ಕಂಗಳಲಿ ಕೆಂಗಿಡಿಯ ದಾನವಗೆ ಕಾ |
ಮೇಶ್ವರಿಯು ಶರಗಳನೆಸೆಯಲು || 268 ||
ನುಡಿದನಾ ಖಳ ದೇವಿಯೊಡನೆ ಬಿಡು ಬಿಡು ನಿನ್ನ |
ಬೆಡಗ ದೋರದಿರೆನ್ನೊಡನೆ ||
ಒಡನೆ ಪಾದಕೆ ಬಂದು | ಪೊಡಮಡಲು ಕಾಯ್ವೆ ಛಲ |
ನಡೆಯದೆನ್ನೊಡನೆ ಕೇಳ್ವಾಣೆ || 269 ||
ಸಲಹುವವನಹುದು ಕ | ತ್ತಲೆಯಲ್ಲಿ ನಮ್ಮವನು |
ಗೆಲುವೆನೆಂದರಿತ ಖಳ ನೀನು ||
ಬಲುಹ ತೋರೆನುತ ಶರ | ಗಳ ಸುರಿಯೆ ಪ್ರಾಣವ |
ನ್ನುಳುಹಿಕೊಂಬೆನೆನುತೋಡಿದನು || 270 ||

**ಮೋಹನ - ತ್ರಿವುಡೆ**

ಇದಿರು ಸಂಗರಕಾಗಿ ನಿಂದಾ |
ಮದಮುಖರು ರಾತ್ರಿಯಲಿ ನೆರೆ ಹಿಂ |
ಬದಿಯೊಳಗೆ ಲಲಿತಾಂಬಿಕೆಯ ಕೆಣ | ಕಿದುದ ಕೇಳಿ || 271 ||

ಹಂಬಲಿಸುತಾ ದಂಡನಾಥೆಯು |
ಅಂಬುಜಾಂಬಕಿ ಶ್ಯಾಮಲಾಂಬೆಯು |
ಕಂಬನಿಯೊಳೈತರುವ ಶ್ರೀಲಲಿ | ತಾಂಬೆಗೆರಗಿ || 272 ||
ಬಳಲಿಸಿದರೇ ತಾಯೆ ಹಾ ಕಡು |
ಖಳರು ವಂಚಿಸಿ ಕಷ್ಟಕೊದಗದೆ |
ಕುಳಿತು ನಾವಿದ್ದೇನು ಫಲ ಭೂ | ತಳದೊಳಿನ್ನು || 273 ||
ಅಗ್ನಿಪ್ರಾಕಾರವನು ಬಲಿಯುತ |
ಶೀಘ್ರದಲಿ ಶ್ರೀಚಕ್ರಕಿನ್ನು ಸ |
ಮಗ್ರ ಶತಯೋಜನಕೆ ಕಾವಲ | ನುಗ್ರತರದಿ || 274 ||
ನಿಲಿಸಿ ರಕ್ಷಿಪೆವೆನುತ ಬಿನ್ನೈ |
ಸಲಿಕೆ ಶ್ರೀ ಲಲಿತಾಂಬೆ ತಾ ಮನ |
ವೊಲಿದು ಜ್ವಾಲಾಮಾಲಿನಿಯೊಡನೆ ತಾ | ತಿಳುಹಲದನು || 275 ||
ಅರ್ತಿಯಲಿ ಶ್ರೀದೇವಿಪದಕೆರ |
ಗುತ್ತ ಜಾಲಾಮಾಲಿನಿಯು ತಾ |
ನುತ್ತಮ ಪ್ರಾಕಾರದಲಿ ನಿಲೆ | ಭಕ್ತಿಯಿಂದ || 276 ||

**ಮಾರವಿ - ಏಕ**

ಸುತ್ತಲು ಪ್ರಾಕಾರವ ಬಲಿಯುತಲಾ |
ಶಕ್ತಿಸೇನೆ ಮೆರೆದ ||
ವಾರ್ತೆಯನಾಲಿಸಿ ಭಂಡಾಸುರ ನಿಜ |
ಪುತ್ರರ ಕರೆಯಿಸಲು || 277 ||
ಜನಕನೆ ಕರೆಸಿಹುದಿನಿತ್ಯಾತಕೆ ಪೇ |
ಳನುಮಾನಿಸದಿನ್ನು ||
ಎನಗುಸುರಿದನದ ಕ್ಷಣದಲಿ ನಾಗೈ |
ವೆನೆನೆ ಚತುರ್ಬಾಹು || 278 ||
ಲಲಿತೆ ಎಂಬವಳು ಬಲು ಮಾಯಾನ್ವಿತೆ |
ಅಳಿಸಿದಳೆಮ್ಮವರ ||
ಕಲಿಗಳು ನೀವ್ ರಣದಲಿ ಭಂಗಿಸುತಲೆ |
ಎಳೆದು ತರುವದವಳ || 279 ||
ಅಟ್ಟಿ ಸುಮನಸರ | ಜುಟ್ಟು ಪಿಡಿದು ನೆರೆ |
ಕಟ್ಟಿ ತಂದ ಎನಗೆ ||
ದಿಟ್ಟೆಯು ಘನವೇ ತಟ್ಟನೆ ಕಳುಹೆನೆ |
ಕೊಟ್ಟಾಜ್ಞೆಯನವಗೆ || 280 ||

**ಭೈರವಿ - ಅಷ್ಟ**

ಸಾಹಸದಲಿ ಪೊರಟ | ರಣಕೆ ಚತು |
ರ್ಬಾಹು ಎನುವ ಸುಭಟ ||
ಆಹವಮಲ್ಲರ ನೆರಹಿಸುತಿನ್ನೂರ |
ಕ್ಷೋಹಿಣಿ ಬಲಸಹಿತ || 281 ||
ಕಡಿ ಹೊಡಿ ಬಡಿರೆನ್ನುತ | ಕೋಟೆಯ ಹೊರ |
ಗಡೆ ಬಂದು ಗರ್ಜಿಸುತ ||
ಧಡಿಗರು ಮೆರೆಯಲು | ಬಾಲ ಸರಸ್ವತಿ |
ಒಡನೆ ಮಾತೆಗೆರಗುತ || 282 ||
ಅಮ್ಮ ಭಂಡನ ಸುತರು | ಕಾಳಗಕೆಂದು |
ನಮ್ಮಡೆಗೈದಿಹರು ||
ಘಮ್ಮನೆ ಕಳುಹೆನ್ನ ಸೆಣಸಿ | ನಾ ನೋಡುವೆ |
ನೊಮ್ಮೆಗೆ ನಿಂದಿದಿರು || 283 ||

ಅಂಬಿಕೆಯದಕೆಂದಳು | ಸಂಗ್ರಾಮದ |
ಹಂಬಲವೇಕೆ ತಾಳು ||
ಒಂಭತ್ತು ವರುಷದ | ನಾಲ್ಕನೆ ಕಣ್ಣಿನ |
ಬೊಂಬೆಯಂತಿಹ ಮಗಳು || 284 ||
ಕಿಡಿ ಸಣ್ಣದಾದರೇನು | ಪವನ ಸೇರೆ |
ಸುಡದೆ ಜಗತಿಯನಿನ್ನು ||
ಬಿಡು ಭಯ ನಿನ್ನಾಶೀರ್ವಾದದ ಬಲದಿಂದ |
ಮಡುಹುವೆ ದೈತ್ಯರನು || 285 ||

**ಮೋಹನ - ತ್ರಿವುಡೆ**

ಛಲವ ಬಿಡದಿರೆ ಮಗಳ ಮುದ್ದಿಸಿ |
ಕಳುಹಲಾಶೀರ್ವದಿಸುತಲೆ ಕಡು |
ಚೆಲುವ ಕವಚಾಯುಧಗಳೀಯುತ | ನಲವಿನಿಂದ || 286 ||
ಏರಿ ಲಘು ಚಕ್ರವನು ಶೌರ್ಯದಿ |
ಸಾರುತಿರಲಾ ದಂಡನಾಥೆಯು ||
ಭೂರಿ ಭಯದಲಿ ಬಂದು ದೇವಿ ಕು | ಮಾರಿಗೆರಗಿ || 287 ||
ಬಾಲೆ ರಾಜಕುಮಾರಿ ನೀನೇ |
ಕಾಳಗಕೆ ತೆರಳುವರೆ ನಾವಿರೆ |
ತಾಳು ಸಂಗರ ಬೇಡ ನಿನಗೆನೆ | ಕಾಲಿಗೆರಗಿ || 288 ||
ಸತ್ವಯುತೆ ನೀನಹುದು ಬಲ್ಲೆನು |
ವ್ಯರ್ಥ ತಡೆಯದಿರೆಂದು ಶೌರ್ಯದಿ |
ರಕ್ತಮುಖಿಯಾಗುತಲೆ ನಡೆದಳು | ಉತ್ಸಹದಲಿ || 289 ||

**ಕಾಂಬೋಧಿ - ಝಂಪೆ**

ಬಾಲಕಿಯು ಸಮರಕೈತರುವುದನು ಕಂಡು ಖತಿ |
ತಾಳುತಾಕ್ಷಣ ಚತುರ್ಬಾಹು ||
ಕಾಳಗಗೆ ಸನ್ನದ್ಧನಾಗಿ ಸುರಿಸುತಲೆ ಶರ |
ಜಾಲಗಳನಿಂತೆಂದನಾಗ || 290 ||
ಎಳೆಯ ಕುವರಿಯು ನೀನು ಕಲಹವೇನೆಮ್ಮೊಡನೆ |
ಸುಲಭವಲ್ಲವು ತಿಳಿದು ಬೇಗ ||
ಲಲಿತೆಯೆಂಬವಳನ್ನು | ಕಳುಹು ನೀನೆಂದು ಮೂ |
ದಲಿಸಲವನೊಡನೆಂದಳಾಗ || 291 ||
ನೊರಜುಗಳನೊರಸೆ ಮದಕರಿಯೇಕೆ ಮರುಳೆ ಘನ |
ಪರಶುವೇತಕೆ ಚಿವುಟೆ ಚಿಗುರ ||
ಧುರದೊಳೆನ್ನನು ಗೆಲದೆ | ಬರಿದೆ ಮಾತೆಯ ಕೇಳ್ವ |
ಮೆರೆವ ವಿಕ್ರಮವನ್ನೆ ತೋರ || 292 ||
ಮೂರುಲೋಕಗಳನ್ನೆ | ಗಾರುಗೆಡಿಸಿಹ ನಮ್ಮ |
ಪೌರುಷವನೇನರಿವೆ ನೀನು ||
ನಾರಿ ಚಿಕ್ಕವಳೆಂದು | ಸಾರಿದರೆ ಹಿತವ ಮದ |
ವೇರಿತೆಂದೆಚ್ಚು ಶರಗಳನು || 293 ||
ಯುದ್ಧದಲಿ ನಿಪುಣನೈ | ಗೆದ್ದವನು ತ್ರೈಜಗವ |
ಬದ್ಧವದನೋಳ್ಪೆನೆಂದೆನುತ ||
ಅರ್ಧ ಚಂದ್ರಾಕಾರದಸ್ತ್ರಗಳನೆಸೆಯುತ್ತ |
ಮರ್ದಿಸಿದಳೆಲ್ಲ ದಾನವರ || 294 ||

**ಸಾಂಗತ್ಯ - ರೂಪಕ**
ಪುತ್ರರ ಮರಣವಾರ್ತೆಯನು ಲಾಲಿಸಿ ಭಂಡ |
ದೈತ್ಯ ಹಾಯೆಂದು ಹಮ್ಮೈಸಿ ||
ವ್ಯರ್ಥವಾದುದು ಎನ್ನ ಬಾಳುವೆ ಘನತರ |
ಕೀರ್ತಿಯ ತ್ರಿಜಗದಿ ಗಳಿಸಿ || 295 ||
ಕೊಲಿಸಿದೆ ಮಕ್ಕಳ | ಕುಲಕೆ ಕಂಟಕನಾದೆ |
ಉಳಿದೆನ್ನ ಮುದ್ದು ಬಾಲಕರ ||
ಇಳೆಯೊಳು ಬಾಳಿಕೊಂಡಿರಲೆಂತು ನಾನಿನ್ನು |
ಅಳಿಯಿತು ಸುಖವು ಮಕ್ಕಳಿರ || 296 ||
ಹಲುಬಿದ ಬಿಚ್ಚಿದ | ತಲೆಯಿಂದ ಹೊರಳಾಡಿ |
ಇಳುಹುತ್ತ ಕಂಬನಿಗಳನು ||
ಇಳೆಯೊಳು ಬಿದ್ದು ಹೊ | ರಳುತಡಿಗಡಿಗೆ ತಾ |
ತಳೆಯುತ್ತಲಿರ್ದ ಮೂರ್ಛೆಯನು || 297 ||

**ಕೇದಾರಗೌಳ - ಅಷ್ಟ**
ಈಕ್ಷಿಸುತದ ಕುಟಿಲಾಕ್ಷ ವಿಷಂಗ ವಿ |
ಶುಕ್ರಾದಿ ದಾನವರು ||
ಆ ಕ್ಷಣ ಪಿಡಿದೆತ್ತಿ ಮಕ್ಕಳಳಿದರೆಂದು |
ದುಃಖಿಸಲೇಕೆಂದರು || 298 ||
ಶೂರತನದಿ ಸುಕುಮಾರರು ಸಂಗರ |
ಧಾರಿಣಿಯೊಳು ಸೆಣಸಿ ||
ವೀರಮರಣವನಿಂದೀ ರೀತಿ ಪಡೆದಿರೆ |
ಭೂರಿ ಕೀರ್ತಿಯ ಗಳಿಸಿ || 299 ||
ತರವಲ್ಲ ನೀನಿಂತು ಮರುಗುವದಿದಕಾಗಿ |
ಧರಿಸು ಧೈರ್ಯವ ಮನದಿ ||
ತರುಣಿಯು ನಮ್ಮ ಧಿಕ್ಕರಿಸಿ ಮೆರೆಯುವದು |
ಪರಿಹಾಸ್ಯವೀಜಗದಿ || 300 ||
ಇಂತೆಂದು ನುಡಿಕೇಳಿ ಚಿಂತೆಯನುಳಿದು ಕೃ |
ತಾಂತನಂದದಿ ಘರ್ಜಿಸಿ ||
ಕಾಂತೆಯನ್ನರಿದೆನ್ನ ಪಂಥ ಮೆರೆಸುವೆ ಕೃ |
ತಾಂತಗಾಕೆಯನೊಪ್ಪಿಸಿ || 301 ||

**ಭೈರವಿ - ಅಷ್ಟ**
ಅಣ್ಣ ನೀನ್ಯೆದುವುದೇಕೆ | ಭರದಿ ಕಳು |
ಹೆನ್ನನು ಸಂಗರಕೆ ||
ಹೆಣ್ಣಿನ ಗರ್ವವ ಮುರಿವೆನೆಂದು ವಿಶುಕ್ರ |
ಸನ್ನಹವಾಗಲಿಕೆ || 302 ||
ತೆರಳೆಂದಪ್ಪಣೆ ಕೊಡಲು | ಮಾಯಕದಿಂದ |
ಮರೆಸಿ ತನುವನಾಗಳು ||
ಉರಿಯ ಕೋಟೆಗೆ ಬರೆ ಶಕ್ತಿದೇವಿಯರೊಂದ |
ನರಿಯದಾಗಿರುತಿರಲು || 303 ||
ದ್ವಾರವ ರಕ್ಷಿಸುತ | ಸ್ತಂಭಿನಿ ಮುಖ್ಯ |
ನಾರಿಯರಿರೆ ಕಾಣುತ ||
ಭೂರಿ ಪ್ರಕಾರವನೇರಲರಿಯದವ |
ಚಾರುಮಾಯವ ನೆನೆದ || 304 ||
ಬಿದ್ದಿರಲೊಂದು ಶಿಲೆ | ಯೋಜನದರ್ಧ |
ಉದ್ದಗಲಗಳಿಂದಲೆ ||
ಸಿದ್ಧಪಡಿಸಿ ಯಂತ್ರವನ್ನದರಲ್ಲೊಂಟು |
ದುರ್ದೇವತೆಗಳನವ || 305 ||

ತಳುವದಾವಾಹಿಸುತ | ರುಧಿರ ಮಾಂಸ |
ಗಳ ಬಲಿಕುಳವನಿತ್ತು ||
ಬಳಿಕೆಂಟು ಶೂಲಗಳ | ಬರೆಯುತ ಕೋಟೆ |
ಯೊಳಗದ ಖಿಳ ಬಿಸುಟ || 306 ||

**ಮಾರವಿ - ಏಕ**

ನಿದ್ರಾ ತಾಂದ್ರ ಕ್ಲೀಬಾ ಕೃಪಣ |
ಇದ್ದರೆಲ್ಲಧೀನಾ ||
ದುರ್ದೈವ ನಿರಹಂಕಾರ ಮಿಲಿಕರು |
ಸಿದ್ಧಿಸೆ ಯಂತ್ರದೊಳು || 307 ||
ಕೆಲರಿಗೆ ನಿದ್ರೆಯು | ಕೆಲರಿಗೆ ಮೂರ್ಛೆಯು |
ಕೆಲರಿಗೆ ತೂಕಡಿಕೆ ||
ಕೆಲರಾಲಸ್ಯದಿ ಕೆಲರು ಷಂಡತನ |
ದೊಳಗಿರೆ ಶಕ್ತಿಗಳು || 308 ||
ನಮಗೇತಕೆ ರಕ್ಕಸ | ರೊಳು ಸುಮ್ಮನೆ |
ಸಮರದ ಗೊಡವೆಯದು ||
ಸುಮನಸರಿಗೆ ಸುಖವಾದರೆ ಫಲವೇ |
ನೆಮಗೆಂದರು ಕೆಲರು || 309 ||
ದೇವಿಯ ಸುಮ್ಮನೆ | ಸೇವಿಸಿ ನಿತ್ಯದಿ |
ನಾವು ದಣಿವುದೇಕೆ ||
ಈ ವಿಧ ಸಮರದೊಳೆನುತ ಜುಗುಪ್ಸೆಯ |
ಭಾವ ಬಂತು ಬಲಕೆ || 310 ||

**ಮೋಹನ - ಅಷ್ಟ**

ಚಿಂತಿಸಿದರು ದಂಡನಾಥೆ ಮುಖ್ಯರು ಬಲ |
ವಿಂತಾದ ಬಗೆಯೇನಿದು ||
ಭ್ರಾಂತಿ ತಾಳದೆ ಶಕ್ತಿ ಸೇನೆಯೀಪರಿಯಲಿ |
ಪಂಥ ಪೌರುಷ ತೊರೆದು || 311 ||
ಯಾವ ಕಾರಣ ಮಹದೇವಿಯ ನಿರ್ಲಕ್ಷ್ಯ |
ಭಾವದಿ ನೋಡುವರೆ ||
ನಾವರಿಯೆವೆನುತ್ತ ಭಯದಿಂದಲಾ ಮಹ |
ದೇವಿಯ ಮರೆಗೊಂಡರೆ || 312 ||
ಆ ಮಹಾದೇವಿ ಸರ್ವಜ್ಞಳಾದುದರಿಂದ |
ಕಾಮೇಶ್ವರನ ಮೊಗವ ||
ಪ್ರೇಮದಿ ನೋಡಿ ನಕ್ಕರೆ ಬಣ್ಣಿಸುವದೇ |
ನಾ ಮಹಾ ಚೋದಿಗವ || 313 ||
ಆ ನಗುವಿನ ಪ್ರಕಾಶದಿ ಮಧ್ಯೆ ಜನಿಸಿದ |
ಆನೆಮೊಗದಿ ಮೆರೆವ ||
ಮಾನವಾಕಾರದ ಹತ್ತು ಕೈಗಳಿಹ ಗ |
ಜಾನನ ಕಡು ಚೆಲುವ || 314 ||
ತೊಡೆಯೊಳು ಸಿದ್ಧಲಕ್ಷ್ಮಿಯ ಕುಳ್ಳಿರಿಸಿಕೊಂಡು |
ಬಿಡದಾಲಿಂಗಿಸಿಕೊಳ್ಳುತ ||
ಪಡೆದನು ಲಕ್ಷ್ಮೀ ಗಣಪತಿಯೆಂಬ ಪೆಸರನು |
ಪೊಡಮಟ್ಟು ದೇವಿಗಾತ || 315 ||
ನುಡಿದನು ಮಾತೆ ನೀ ಪಡೆದಿಹುದೇಕೆನ್ನ |
ಮೃಡನ ವದನವ ನೋಡಿ ||
ದೊಡನೆ ನಗೆಯ ಬೀರಿ | ನುಡಿವುದು ಕಾರ್ಯವ |
ತಡೆಯದೆ ಕೃಪೆಯ ಬೀರಿ || 316 ||

ಕಂದ ಲಾಲಿಸು ಖಳರಿಂದು ಮಾರಣ ಮಂತ್ರ |
ದಿಂದ ಗೆಲಿದರೆಮ್ಮನು ||
ಕುಂದದೆ ಜಯ ವಿಘ್ನಯಂತ್ರವ ಛೇದಿಸಿ |
ಕೊಂದು ಬಾ ದೈತ್ಯರನು || 317 ||
ಪೊಡಮಟ್ಟು ಜನನಿಗೆ ನಡೆತಂದು ಗಣಪನು |
ಪುಡುಕುತ್ತ ಯಂತ್ರವನು ||
ಒಡನೆ ಝೇಂಕಾರವ ಮಾಡಿದರದರೊಳ |
ಗಡಗಿರ್ದ ಸಿದ್ಧಿಗಳು || 318 ||
ರಣಕೆ ನಿಂದರೆ ಕಂಡು ಗಣನಾಥನೆಲ್ಲರ |
ಹನನಗೊಳಿಸಿ ನಿಂದನು ||
ಕ್ಷಣದಿ ವಿಕಾರವಳಿದು ಶಕ್ತಿ ದೇವಿಯ |
ರನುವರಕನುವಾದರು || 319 ||

**ಭಾಮಿನಿ**

ವಾರಣಾಸ್ಯನು ಕರೆಸಿದನು ಪರಿ |
ವಾರಗಳನಾ ಮೋದ ದುರ್ಮುಖ |
ವೀರವಿಘ್ನ ಪ್ರಮೋದ ಸುಮುಖಿ ಸುವಿಘ್ನಕರ್ತನನು ||
ಆರು ಮಂದಿಗಳನ್ನು ಕೂಡುತ |
ಘೋರ ದೈತ್ಯರ ಬಲವ ಮುತ್ತಲು |
ವೀರನಾದ ವಿಶುಕ್ರನಾಗ ಗಜಾಸುರನ ಕರೆದ || 320 ||

**ಮಾರವಿ - ಏಕ**

ಚಿಕ್ಕೊಡೆಯನೆ ಏತಕ್ಕೆ ಕರೆಸಿದೆ ವಿ |
ಶುಕ್ರಾಸುರ ನೀನು ||
ಘಕ್ಕನೆ ಎನ್ನಿಂದಹ ಕಾರ್ಯವ ಪೇ |
ಳಲ್ಕದ ನಡೆಸುವೆನು || 321 ||
ಧೀರ ಗಜಾಸುರ ವಾರಣಾಸ್ಯ ಪರಿ |
ವಾರವನೊಡಗೊಂಡು ||
ಶೂರತನದಿ ಬಹ | ಸಾರುತವನ ಸಂ |
ಹಾರ ಮಾಳ್ಪುದೆಂದು || 322 ||
ಕರಿವದನನ ಬಿಡು | ಕರಿಗೊರಳನು ಬರೆ |
ಧುರದೊಳು ಲೆಕ್ಕಿಸೆನು ||
ಪರಿಕಿಸೆನ್ನುತಲಿ ನೆರಹಿದೈತ್ಯರನು |
ಪೊರಟ ಗಜಾಸುರನು || 323 ||

**ಭೈರವಿ - ಅಷ್ಟ**

ಆನೆಮೊಗದಿ ಮೆರೆವ | ಪೋರನೆ ವ್ಯರ್ಥ |
ಚೂಣಿಗೆ ಬಂದಿರುವ ||
ದೇನು ಮರುಳು ಬಿಡು | ದಾನವರಿಗೆ ನಿನ್ನ |
ಪ್ರಾಣ ಕೊಡುವ ಮನವ || 324 ||
ಪ್ರಾಣವ ತೆಗೆವವರು | ದೈತ್ಯರು ಬಂದು |
ಚೂಣಿಗೆ ನಿಂದವರು ||
ಹಾನಿಗೊಂಡೀರ್ಪರನೇಕರು ಡಂಭವ |
ನೀನೆಮ್ಮೊಳಾಡದಿರು || 325 ||
ಎಳ್ಳುಂಡೆ ಕಜ್ಜಾಯವ | ಮೆಲ್ಲುತಲಿಂತು |
ಡೊಳ್ಳನು ಬೆಳೆಸಿರುವ ||
ಖುಲ್ಲನೆ ಬಗೆವವನಲ್ಲವೀಗಲೆ ಧುರ |
ದಲ್ಲಿ ತೋರಿಸು ಶೌರ್ಯವ || 326 ||

ಮೆಲ್ಲುವೆ ಕಜ್ಜಾಯವ | ಮುನಿಯಲಿದಿ |
ರಿಲ್ಲ ರಣದಿ ದಾನವ ||
ನಿಲ್ಲೆಂದು ಶರ ಬಿಡ | ಲಲ್ಲಿ ಬಿದ್ದನು ಭರ |
ದಲ್ಲಿ ನೀಗುತ ಪ್ರಾಣವ || 327 ||

**ಭಾಮಿನಿ**
ಮದಮುಖಿರ ಸಂಹರಿಸುತಲೆ ಗಜ |
ವದನ ನಡೆತಂದಾಗ ದೇವಿಯ |
ಪದಕೆ ವಂದಿಸಿ ನಿಂದಿರಲು ಸಂತಸವ ತಾಳುತಲಿ ||
ಇದು ಮೊದಲು ನೀನಿನ್ನು ತ್ರಿಜಗದಿ |
ಮೊದಲ ಪೂಜೆಯಗೊಂಡು ಭಕ್ತರ |
ಮುದದಿ ರಕ್ಷಿಪುದೆಂದು ವರವಿತ್ತಳು ಮಹಾದೇವಿ || 328 ||

**ಸೌರಾಷ್ಟ್ರ - ತ್ರಿವುಡೆ**
ಧುರದಿ ಮಡಿದ ಗಜಾಸುರನೆನುವ |
ದರಿತು ಬಳಿಕ ವಿಶುಕ್ರನಾಕ್ಷಣ |
ಕರೆದು ಪೇಳೆ ವಿಷಂಗಗೆಲ್ಲವ | ಭರದೊಳವನು || 329 ||
ಚಿತ್ರದೊಳು ಖತಿವೆತ್ತು ತಾ ಬರಿ |
ಸುತ್ತಲಾ ಕಚತಾದಿ ವೀರರ |
ಹತ್ತು ಮಂದಿಗಳನ್ನು ಧೂಮಿನಿ | ಪುತ್ರರನ್ನು || 330 ||
ಸೊಕ್ಕಿರುವ ಗಜಗಳನಡರುತ ವಿ |
ಶುಕ್ರನು ವಿಷಂಗಾದಿಗಳು ಸಮ |
ರಕ್ಕೆ ನಡೆದರೆ ಕಂಡು ರೋಷದಿ | ಶಕ್ತಿ ಸೇನೆ || 331 ||
ಹಿಂಡುವೆವು ದಾನವರನೆನುತಲೆ |
ದಂಡನಾಥೆ ಶ್ಯಾಮಳಾಂಬಿಕೆ |
ಗೊಂಡು ಶಸ್ತ್ರಗಳನ್ನು ಬರೆ ರಣ | ಮಂಡಲಕ್ಕೆ || 332 ||

**ವಾರ್ಧಕ**
ಹೋರಾಡಿದಳು ದಂಡನಾಥೆಯು ವಿಷಂಗನಲಿ |
ಧೀರೆ ಶ್ಯಾಮಲೆ ವಿಶುಕ್ರನಲಿ ಭರದೊಳ |
ಶ್ವಾರೂಢೆಯಲ್ಲೂಕಜಿತನೊಡನೆ ಖಳಪುರಸೇನನೆಂಬ ಭಟಗೆ ||
ಭೋರನಿದಿರಾಗೆ ಸಂಪತ್ಕರಿಯು ವಿಷನೆಂಬ |
ಘೋರ ದೈತ್ಯನ ನಕುಲೇಶ್ವರಿಯು ಖತಿಯಿಂದ |
ಸಾರುತತಿರತ್ಕರಿಣೀ ಕುಂತೀ ಸೇನನು ತುಡುಕುತೀರ್ದರು ಛಲದಲಿ || 333 ||

**ನಾದನಾಮಕ್ರಿಯೆ - ಅಷ್ಟ**
ಗೆಲುವೆನು ಶಕ್ತಿ ಸೇನೆಯನು | ಯುಕ್ತಿ |
ಯಲಿ ತಾನೆನುತಲಿ ವಿಶುಕ್ರದಾನವನು ||
ಸೆಳೆದೆಚ್ಚ ತೃಷಾಸ್ತ್ರವನ್ನು | ದೇವಿ |
ಬಲವು ಬಾಯಾರಿ ಕಂಗೆಡುತಿರುವುದನು || 334 ||
ಕಂಡು ಶ್ಯಾಮಲೆಯು ಭರದಿ | ವರ |
ದಂಡನಾಥೆಯ ಕರೆದೆಂದಳಾಕೆಯಲಿ ||
ಪುಂಡನೆಚ್ಚ ತೃಷಾಸ್ತ್ರದಲಿ | ಭೀತಿ |
ಗೊಂಡಿದೆ ಬಾಯಾರಿ ಬಲವು ಶೀಘ್ರದಲಿ || 335 ||
ಬೇಗ ನಿನ್ನ ರಥದೊಳಗಿರುವ | ಸುಧಾ |
ಸಾಗರನಿಗೆ ನೇಮವಿತ್ತರೆ ಪೊರೆವ ||
ನೀಗಿಸೆ ತೃಷೆಯನ್ನು ಬಲವ | ಲೇ |
ಸಾಗಿ ಸುರಿಸುವನಮೃತವರ್ಷವನವ || 336 ||

ಕರೆಸಿದಳಾ ದಂಡನಾಥೆ | ಆತ |
ಗೊರೆದಳು ಹೀಗೆಂದು ಲೋಕ ವಿಖ್ಯಾತೆ ||
ಸುರಿಸಿ ನೀನಮೃತ ವರ್ಷವನು | ಪರಿ |
ಹರಿಸಿ ತೃಷೆಯ ರಕ್ಷಿಸೆಮ್ಮ ಸೇನೆಯನು || 337 ||
ಎನಲು ಹಸಾದವೆಂದವನು | ಒಂದು |
ಕ್ಷಣದಲ್ಲಿ ಸುರಿಸಿದನಮೃತಧಾರೆಯನು ||
ಅನಿತ ಸೇವಿಸಿ ಹರುಷವನು | ತಾಳಿ |
ಕುಣಿದುದು ಬಲಪಡೆದಧಿಕ ಶಕ್ತಿಯನು || 338 ||

**ಮಾರವಿ - ಏಕ**
ಬಲವತಿಚೇನಗೊಳೆ ಹರುಷದಿ ಶ್ಯಾ |
ಮಲೆಯು ವಿಶುಕ್ರನೊಳು ||
ಮುಳಿದೆಂದಳು ಘಡ | ಬಲವ ಬಳಲಿಸಿದ |
ಛಲ ತೋರಿಂದಿನೊಳು || 339 ||
ಗಳಹದಿರೊಮ್ಮೆಗೆ ಗೆಲಿದಿಹೆನೆನುತಲಿ |
ಕಲಿಗಳು ದೈತ್ಯರಿಗೆ ||
ಲಲನೆಯರೆಣೆಯೇ ಕೊಳುಗುಳದಲಿ ಕೈ |
ಚಳಕವ ನೋಡು ಮಿಗೆ || 340 ||
ದುರ್ಮತಿಯೇ ಬಲು | ಹೆಮ್ಮೆಯಾಡದಿರು |
ಒಮ್ಮೆಗೆ ನೋಡೆನ್ನ ||
ಬ್ರಹ್ಮಶಿರ ಶರವ | ಮರ್ಮವೆನುತೆಸೆದು |
ಸಂಹರಿಸಿದಳವನ || 341 ||

**ಭೈರವಿ - ಅಷ್ಟ**
ಖಾತಿಯೊಳು ವಿಷಂಗನ | ತಡೆದು ದಂಡ |
ನಾಥೆ ನುಡಿದಳಾಕ್ಷಣ ||
ಯಾತುಧಾನನೆ ತೋರು ಶೌರ್ಯವ ನಿನ್ನನು |
ಘಾತಿಸದೆ ಬಿಡೆನು ನಾ || 342 ||
ಧಿರುರೆ ಶಭಾಸು ನಾರಿ | ಸಂಗರದೊಳು |
ಧರಣಿಯೊಳ್ ಯಾರು ಸರಿ ||
ಮರುಳೆ ನಿನಗೆ ಅಲ್ಪ ಬಲರನ್ನು ಗೆಲಿದಿರ್ಪ |
ತೆರನಲ್ಲ ನುಡಿದೇ ಸಾರಿ || 343 ||
ಅಲ್ಪರೆಂತಾಗುವರು | ನುಡಿಗಳಲ್ಲಿ |
ದರ್ಪ ತೋರುವ ಖಳರು ||
ತಪ್ಪದೆ ನಿಲ್ಲೆಂದು ತರಿದಳು ಗದೆಯಿಂದ |
ಅಪ್ಪಳಿಸುತಲವನ || 344 ||

**ನಾದನಾಮಕ್ರಿಯೆ - ಅಷ್ಟ**
ಅನುಜರಳಿದರೆಂಬುದನು ಕೇಳಿ | ಭಂಡ |
ದನುಜ ಮನದಿ ಮರುಕವ ತಾಳಿ ||
ಜನ ಪದದೊಳು ಬಿದ್ದು ಹೊರಳಿದ | ಎನ್ನ |
ಹಣೆಯ ಬರಹವಿನಿತಾಯ್ತೆಂದ || 345 ||
ಮೃತ್ಯುಂಜಯನ ವರ ಪಡೆದೆನು | ಪುರ |
ಮೊತ್ತವ ರಣದಲ್ಲಿ ಗೆಲಿದೆನು ||
ಪೃಥ್ವಿ ಮೂರರೊಳು ಕೀರ್ತಿಯ ತಾಳಿ | ಸೋಲ |
ವಾಯ್ತೆ ಹಾ ತರುಣಿಯ ಧುರದಲ್ಲಿ || 346 ||

ಮಾನ ನೀಗಾಡಿಕೊಂಬುದಕಿಂತ | ಎನ್ನ |
ಪ್ರಾಣವ ಕಳೆದುಕೊಂಬುದು ಹಿತ ||
ಏನ ಮಾಡುವುದೆಂದು ನೆರೆ ನೊಂದು | ಭಂಡ |
ದಾನವ ಕೆದರಿದ ತಲೆಯಿಂದ || 347 ||

**ಸೌರಾಷ್ಟ್ರ - ತ್ರಿವುಡೆ**

ಅರರೆ ತಪ್ಪಾಯ್ತೆನುತ ಚಿಂತೆಯ |
ತೊರೆದು ಖಳ ನಾನಿಂದು ತರುಣಿಯ |
ತರಿಯದಿರೆನೆಂದೆನುತ ದಾನವ | ರೆರೆಯನಂದು || 348 ||
ಕರೆಸಿ ಕುಟಿಲಾಕ್ಷಾದಿ ದೈತ್ಯರ |
ನೆರವಿಯನ್ನುಳಿದೀರ್ಪ ಬಲಸಹ |
ಭರದೊಳೇರುತ ಅಖಿಲ ರಥವನು | ಧುರಕೆ ಪೊರಟ || 349 ||
ಒಂದು ಸಾವಿರ ಕೇಸರಿಗಳನು |
ಬಂಧಿಸಿರಲಾ ಈಕೆ ದೈತ್ಯರ |
ವೃಂದ ಬೊಬ್ಬಿರಿಯಲಿಕೆ ಸಮರಕೆ | ನಿಂದನಾಗ || 350 ||
ಖಳನು ಧುರಕೈತರುವ ಹದನವ |
ತಿಳಿದು ಶ್ರೀ ಲಲಿತಾಂಬೆ ತಾನೇ |
ಕೊಳುಗುಳಗೆ ಸನ್ನದ್ಧಳಾದಳು | ನಲವಿನಿಂದ || 351 ||
ನಿಗಮಗಳು ಚಕ್ರಗಳು ಪುರುಷಾ |
ರ್ಥಗಳು ಹಯಗಳು ರಥಕೆ ಅಂತ |
ಸ್ಸುಗಳು ಒಂಭತ್ತರಲಿ ದೇವಿಯ | ರುಗಳ ಕೂಡಿ || 352 ||
ಮಾತೆಯೇರಿದಳಾಗ ಮೆರೆವ ವ |
ರೂಥ ಶ್ರೀಚಕ್ರವನು ದಂಡನಿ |
ನಾಥೆ ಮುಖ್ಯರನಾಯುಧಗಳ ಸ | ಮೇತ ಮುದದಿ || 353 ||
ಸುಮನಸರು ಜಯವೆಂದು ಸುರಿಸಲು |
ಸುಮದ ಮಳೆಯನು ದಂಡನಾಥೆಯು |
ಕುಮತಿ ಕುಟಿಲಾಕ್ಷಾದಿಗಳೊಡನೆ | ಸಮರಕೈದಿ || 354 ||

**ಭೈರವಿ - ಅಷ್ಟ**

ಲಲಿತೆಯೆಂಬವಳು ಯಾರೆ | ದೈತ್ಯರ ಕುಲ |
ಕೊಲಿಸಿದವಳನು ತೋರೇ ||
ತಳೆದಿಹ ಗರ್ವವ | ನಿಳುಹುವೆ ನಿಮಿಷದಿ |
ಕಲಹಕೆನ್ನಲಿ ನಿಂದರೆ || 355 ||
ಇದಿರು ನಿಂದೀರ್ಪವಳಾ | ಜೈಸದೆ ಸುಮ್ಮ |
ನೊದರುವದೇಕೆ ಖಳ ||
ಇದಿರೆ ತೃಣವು ಕಲ್ಪಾಂತದ ಕಿಚ್ಚಿಗಿ |
ನ್ನಧಿಕ ಸಮರ ಕೌಶಲ || 356 ||
ಕುಟಿಲತನದ ಯುದ್ಧದಿ | ಮೆರೆವ ದೈತ್ಯ |
ಕಟಕವರಿದ ಗರ್ವದಿ ||
ಕುಟಿಲಾಕ್ಷನಲಿ ನಿಲೆ | ಘಟಿಕೆಯೊಳ್ ಗೆಲುವೆ ಸಂ |
ಘಟಿಸಿಹ ಸಂಗರದಿ || 357 ||
ಕಪಟ ಮಾರಣಗಳಲಿ | ದಾನವರೆಲ್ಲ |
ನಿಪುಣರು ಸಮರದಲಿ ||
ವಿಪರೀತ ನುಡಿಗಳೇಕೆಂದೆಚ್ಚುತರಿದಳು |
ಅಪರಿಮಿತದ ಖಳರ || 358 ||

**ಮಾರವಿ - ಏಕ**
ಕಂಡನು ಬಲವಳಿದುದನು | ಖತಿ |
ಗೊಂಡಾ ಭಂಡಾಸುರನು ||
ಖಂಡ ಪರಶುವಿನ ತೆರದಿ | ರಣ |
ಮಂಡಲಗೈತರೆ ಛಲದಿ || 359 ||
ಕಾಣುತದನು ಲಲಿತಾಂಬೆ | ಘಡ |
ದಾನವನಸುವನು ಗೊಂಬೆ ||
ತಾನೆನುತಲೆ ನಡೆತರಲು | ವರ |
ಚೂಣೆಗೊರೆದ ದೇವಿಯೊಳು || 360 ||

**ಶಂಕರಾಭರಣ - ಮಟ್ಟೆ**
ನಾರಿ ನೀನೆ ಕಲಹವೇನೆ |
ಮೂರುಲೋಕಾಧೀಶನೊಡನೆ ||
ಯಾರು ನಿನ್ನ ಕಾಯ್ದ ಭಟರು | ತೋರು ಬೇಗನೆ || 361 ||
ಮೂರುಲೋಕದೊಡೆತನಗಳ |
ಯಾರು ನಿನಗಿತ್ತವರು ಖೂಳ ||
ಸೇರಿ ಎನ್ನ ಮರೆಯ ಬಾಳು | ಧಾರಿಣಿಯೊಳು || 361 ||
ಹರಿಹರ ಬ್ರಹ್ಮಾದ್ಯರೆಲ್ಲ |
ತರಹರದೊಳಿಹರು ಸುಳ್ಳಲ್ಲ ||
ಬರಿದೆ ಸಾಯಲೇಕೆ ಕಾಯ್ವ | ಮರೆಯಗೊಂಡರೆ || 362 ||
ಹರಿಹರಾದಿ ಸೃಷ್ಟಿಯೆಲ್ಲ |
ಮರುಳೆಯೆನ್ನಿಂದಾದ ಸೊಲ್ಲ ||
ನರಿಯೊ ಪರಂಜ್ಯೋತಿ ಜ್ಞಾನ | ಶಕ್ತಿ ಎಂಬುದ || 363 ||
ಚಿತ್ರಚಾರಿ ವರದೊಳರ್ಧ |
ಶಕ್ತಿ ಬರುವುದಿದಿರು ನಿಂದ |
ವ್ಯಕ್ತಿಯಿಂದ ಗೆಲಿದೆ ನಾನು | ಪೃಥ್ವಿ ಮೂರನು || 364 ||
ಸತ್ವಶಾಲಿಯಾಗಿರಲ್ಕೆ |
ದೈತ್ಯ ಬಲವ ಕೊಲಿಸಿದೇಕೆ |
ವ್ಯರ್ಥ ನಾರಿಯರ ಕೈಯಿಂದ | ಧೂರ್ತ ದಾನವ || 365 ||

**ಸೌರಾಷ್ಟ್ರ - ತ್ರಿವುಡೆ**
ವೆತ್ತು ಖಾತಿಯ ದೇವಿ ವಚನದಿ |
ದೈತ್ಯನಾಕ್ಷಣ ಅಂಧತಾಮಿ |
ಶ್ರಾಸ್ತ್ರ ಬಿಡೆ ಕತ್ತರಿಸಲು ಮಹಾ | ಮಿತ್ರ ಶರದಿ || 366 ||
ಒಡನೆ ಪಾಖಂಡಾಸ್ತ್ರವನು ಬಿಡೆ |
ಧಡಿಗನದ ಗಾಯತ್ರಿ ಶರದಲಿ |
ಕಡಿದಳು ಮಹಾದೇವಿಯಾಕ್ಷಣ | ಘುಡುಘುಡಿಸುತ || 367 ||
ಖಳ ಮಹಾರೋಗಾಸ್ತ್ರವನು ಬಿಡೆ |
ತಿಳಿದು ನಾಮತ್ರಯದ ಶರದಲಿ |
ಗೆಲಿದು ನಿಂದಳು ದೇವಿ ರೋಷವ | ತಳೆದು ದನುಜ || 368 ||
ಒಡನೆ ಬಿಡಲು ಮಹಾಸುರಾಸ್ತ್ರವ |
ಮಡಿದ ಮಹಿಷನು ಶುಂಭ ಮುಖ್ಯರ |
ಗಡಣ ನಡೆತರೆ ರಣಕೆ ದೇವಿಯು | ಘುಡುಘುಡಿಸುತ || 369 ||
ಅಟ್ಟಹಾಸವ ಮಾಡಲದರಿಂ |
ಹುಟ್ಟಿ ದುರ್ಗಾಂಬಿಕೆಯು ಸಿಂಹವ |
ತಟ್ಟನೇರುತ ಬಂದು ದೈತ್ಯರ | ಕುಟ್ಟಿ ಕೆಡಹೆ || 370 ||

**ವಾರ್ಧಕ**

ಒಲಿದು ಪರಮೇಶ್ವರನು ಕೊಟ್ಟಿರ್ಪ ವರಬಲದಿ |
ಖಳನು ಸೃಜಿಸಿದನು ತಾ ಹಿರಣ್ಯಕ ದೈತ್ಯ |
ಬಳಗವನ್ನಳಿದವರ ಕಳುಹೆ ಸಂಗರಕೆ ಶ್ರೀದೇವಿಯದನು ತಿಳಿದು ||
ಗಳಿಗೆಯಲಿ ಚಿಮ್ಮುತ ಹತ್ತು ಬೆರಳುಗಳ |
ಸೃಜಿಸಲಿಕೆ ಶ್ರೀಹರಿಯ ಮತ್ಸ್ಯಾದಿ ಅವತಾರ |
ಗಳ ಖಳನ ಸೃಷ್ಟಿಯ ಕೊಲಲು ಪ್ರತಿಕಲ್ಪಗಳಲಿ ಸಂಜನಿಪುದೆನುತವರಿಗೆ || 371 ||

**ಕಂದ**

ಹತ್ತವತಾರಗಳಿಗೆ ತಾ |
ನಿತ್ತು ಮಹಾದೇವಿಯು ನೇಮವನ್ನೀ ತೆರದಿಂ ||
ಅರ್ತಿಯೊಳೆಲ್ಲವರಂ ಕಳು |
ಹುತ್ತಲೆ ಭಂಡಾಸುರನನು ಕಂಡಿಂತೊರೆದಳ್ || 372 ||

**ಮೋಹನ - ತ್ರಿವುಡೆ**

ಎಲವೋ ಭಂಡಾಸುರನೆ ಸಂಗರ |
ಕಲಿಯು ನೀನಹುದೆಂದು ಮೆಚ್ಚಿದೆ |
ತಿಳಿದಿಹೆನು ಸುಜ್ಞಾನಿ ನೀನೆಂ | ದಿಳೆಯೊಳಿನ್ನು || 373 ||
ಹತ್ತುಸಾವಿರ ವರುಷ ತಪವೆಸ |
ಗುತ್ತ ಪರಮೇಶ್ವರನ ಮೆಚ್ಚಿಸಿ
ಉತ್ತಮದ ವರಗಳನು ಪಡೆದಿಹ | ಸತ್ತ್ವಶಾಲಿ || 374 ||
ಗಿರಿಜೆ ಶುಕ್ರಾಚಾರ್ಯ ಮುಖ್ಯರು |
ಅರುಹಿದರೆ ನೀತಿಗಳ ನೆರೆ ಧಿ |
ಕ್ಕರಿಸಿ ದುಷ್ಟರ ಸಂಗದಲಿ ನೀ | ಧರಣಿಗಳನು || 375 ||
ವ್ಯರ್ಥ ಪೀಡಿಸುತಿರುವುದುಚಿತವೆ |
ಇತ್ತು ನಾಕವ ತ್ರಿದಶರಿಗೆ ಮೆರೆ |
ಯುತ್ತಿರಲು ಶೂನ್ಯಕದಿ ಪಾಲಿಪೆ | ನಿತ್ಯ ನಿನ್ನ || 376 ||
ಎನಲು ಮಣಿದೊಡನೆಂದ ತ್ರಿಜಗ |
ಜ್ಜನನಿ ತವಘನ ವಚನ ಸುಧೆಯದು |
ಒಣಗಿರುವ ಸುಜ್ಞಾನವನು ಚೇ | ತನಗೊಳಿಸಿತು || 377 ||
ಹರಿದುದೆನ್ನಯ ದುರಿತ ಪೂರ್ವ |
ಸ್ಮರಣೆ ತಳೆದೆನು ತಾಯೆ ನೀನವ |
ಧರಿಸು ಬಿನ್ನಪವಿದನು ಬೀರುತ | ಕರುಣೆಯನ್ನು || 378 ||

**ವಾರ್ಧಕ**

ಪೂರ್ವಜನ್ಮದಲಿ ಮಾಣಿಕ್ಯಶೇಖರನೆಂಬ |
ದೇವತೆಯು ನಾ ಶ್ರೀ ಮಹಾರಮಾದೇವಿಯಲಿ |
ಸೇವೆಯಿಂದಿರುತಿರಲು ಒಂದುದಿನ ಗಂಗಾನದೀ ತೀರದೆಡೆಗೆ ತೆರಳಿ ||
ಕಾವಲಿಗೆ ನಿಲಿಸುತೆನ್ನನು ತಪವನೆಸಗುತಿರೆ |
ದೇವಿ ಕಿನ್ನರ ತರುಣಿಯೋರ್ವಳೈತರುತಲಾ |
ಪಾವನನದಿಯೊಳ್ ಮೀಯುತಿಹ ವೇಳ್ಯದಲಿ ಸುಳಿಗೆ ಮೊರೆಯಿಡುವ ಧ್ವನಿಯ ಕೇಳಿ || 379 ||

**ಭಾಮಿನಿ**

ಜಡಜನೇತ್ರೆಯ ಪೊರೆಯಲೆನುತಲೆ |
ವಡನೆ ನದಿಯಲಿ ಧುಮುಕಿ ನಾರಿಯ |
ದಡವ ಸೇರಿಸಲವಳ ರೂಪವ ಕಂಡು ಮೋಹದಲಿ ||
ಮಡದಿಯಾಗೆಂದರಿಕೆ ಗೈದರೆ |
ದೃಢದಿ ಪೊರೆದವ ಜನಕಗೆಣೆ ನೀ |
ಬಿಡು ಮನದ ಬಯಕೆಗಳನೆನುತಲೆ ಪೇಳೆ ನೀತಿಗಳಾ || 380 ||

ನುಡಿಯನಾ ಧಿಕ್ಕರಿಸಿ ಮೋಹದಿ |
ಪಿಡಿಯೆ ಸೆರಗನು ಭೀತಿಯಲಿ ಮೊರೆ |
ಯಿಡಲು ತರುಣಿಯು ಕೇಳಿ ಲಕ್ಷ್ಮೀದೇವಿ ಕೋಪದಲಿ ||
ಪೊಡವಿಯಯಲಿ ಕಡುದೈತ್ಯನಾಗೆಂ |
ದೊಡನೆ ಶಪಿಸಲು ನಡುಗಿ ಭಯದಲಿ |
ಪೊಡಮಡುತ ಮರುಗಲಿಕೆ ಕರುಣವದೋರಿ ಶ್ರೀದೇವಿ || 381 ||

**ಕಂದ**
ಪರಮ ಪತಿವ್ರತೆಯನ್ನೀ |
ಪೊರೆದಿಹ ಕಾರಣದಿ ನಿನಗೆ ಶ್ರೀಲಲಿತಾಂಬಾ ||
ಚರಣದೆಡೆಯೊಳಗೆ ಮುಕ್ತಿಯು |
ದೊರಕುವದೆಂದಭಯವಿತ್ತಳೊಲಿದೀ ತೆರದಿಂ || 382 ||

**ಸಾವೇರಿ - ರೂಪಕ**
ಇತ್ತಡಾ ಸಾಗರ ಪುತ್ರಿಯಭಯವನ್ನು |
ದೈತ್ಯ ನಾನಾದೆನೀ ತೆರದಿ ||
ಅರ್ತಿಯಿಂದಲೆ ದಿವ್ಯ ಮೂರ್ತಿಯ ಕಂಡು ಕೃ |
ತಾರ್ಥನಾಗಿಹೆನಿಂದು ಜಗದಿ || 383 ||
ಜನನಿ ಬಿನ್ನಪ ಪಾದ | ವನಜ ವೀಕ್ಷಿಸಿದೆನ್ನ |
ಜನಪದದಲಿ ಹುಟ್ಟಿದಂತೆ ||
ಮಣಿದ್ವೀಪವಾಸವ | ನೆನಗೆನ್ನ ಹೊಂದಿರ್ಪ |
ದನುಜರಿಗಿತ್ತು ರಕ್ಷಿಪುದು || 384 ||
ಎಂದು ಭಕ್ತಿಯೊಳಾಡಿ ವಂದಿಸಿ ಸಮರಕೆ |
ನಿಂದಿರೆ ಶ್ರೀಲಲಿತಾಂಬೆ ||
ಚಂದದಿ ಕಾಮೇಶ್ವರಾಸ್ತ್ರದಿ ತರಿಯಲು |
ಅಂದು ಮಥಿಸುತಲೆ ಶಿರವು || 385 ||
ವದಗಿನಿಂದಲಿ ದೇವಿ | ಪದತಳದಲಿ ಬಾಳೆ |
ವಧಿಸಿತೆಲ್ಲರ ದೇವಿ ಶರವು ||
ವದಗಿನಿಂದಾತ್ಮವು ಮುಕ್ತಿಯ ಸೇರಿತು |
ತ್ರಿದಶರು ಜಯಜಯವೆನಲು || 386 ||

**ವಾರ್ಧಕ**
ಪಡೆದರಾ ದಾನವರು ಮುಕ್ತಿಸಂಪದವ ಸುರ |
ಗಡಣ ಶ್ರೀದೇವಿಯಂ ಪೂಜಿಸುತ ನುತಿಸಿದರೆ |
ಕೊಡುತ ಭಯವಂ ಶಕ್ತಿಸೇನೆಯಂ ಮನ್ನಿಸಲು ಹರಿಹರ ಬ್ರಹ್ಮರೈದಿ ||
ದೃಢಮನದೊಳಡಿಗೆರಗೆ ಕಡು ಕರುಣದಿಂದಭಯ |
ಕೊಡುತವರ ಸಂತೈಸಿ ಪರಮ ಸಂತಸದಿಂದ |
ಪಡೆದಳಂತರ್ಧಾನಮಂ ಮಣಿ ದ್ವೀಪದಲಿ ನೆಲೆಯಾದಳೆಂಬ ತೆರದಿ || 387 ||

**ಕಂದ**
ಮಂಗಳಮಂ ಪಾಲಿಸು ದಿ |
ವ್ಯಾಂಘ್ರಿಯ ಸಂಸ್ತುತಿಪ ಭಕ್ತ ಜನಕರ ತಾಯೆ ||
ಗಂಗಾಧರ ಪುರಹರನ |
ರ್ಧಾಂಗಿಯೆ ನಾ ಮಣಿದು ಬೇಡಿಕೊಂಬೆನು ಪದದೊಳ್ || 388 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪದವೀಧರ ಯಕ್ಷಗಾನ ಸಮಿತಿ ಮುಂಬಯಿ

**ಪ್ರಸಂಗ ಪ್ರತಿ ಆಧಾರ:** ಪದವೀಧರ ಯಕ್ಷಗಾನ ಸಮಿತಿ ಮುಂಬಯಿ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಲ. ನಾ. ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಲ. ನಾ. ಭಟ್

**ಅಂತರಜಾಲ ಪ್ರತಿ ಬರವಣಿಗೆ:** ಲ. ನಾ. ಭಟ್, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ